ಮಾನಸ

ಆಗಸ್ಟ್ 2004 ತಿಂಗಳ ಪತ್ರಿಕೆ

- ಕಾಣೆಯಾಗುತ್ತಿರುವ ಹೆಣ್ಣು ಮಗು
- 'ಸ್ತ್ರೀವಾದದ ಭವಿಷ್ಯ' - ಒಂದು ಲೇಖನ
- ಇರಾನ್‌ನ ಆಟಗಾರ್ತಿ - ನಾಸಿಮ್ ಹಾಸನ್‌ಪೋರ್
- ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಮಹಿಳಾ ಸಾಹಿತ್ಯ
- ತಾಂತ್ರಿಕ ಶಿಕ್ಷಣ ವಿದ್ಯಾರ್ಥಿನಿ / ವಿದ್ಯಾರ್ಥಿಗಳೊಂದಿಗೆ ಒಂದು ಸಂವಾದ
- 'ಮಾನಸ' ಓದುಗರೊಂದಿಗೆ ಒಂದು ಮುಕ್ತ ಸಂವಾದ/
  ಸಾಮಾನ್ಯ ಕನಿಷ್ಠ ಕಾರ್ಯಕ್ರಮ - ಮಹಿಳೆಯರ ಕುರಿತಂತೆ
- 'ಸ್ತ್ರೀ ಸ್ಪಂದನ' ದಿಂದ ಚನ್ನಪಟ್ಟಣದಲ್ಲಿ ಒಂದು ಕಾರ್ಯಕ್ರಮ
- ಸಾಮಾನ್ಯ ಕನಿಷ್ಠ ಕಾರ್ಯಕ್ರಮ
  - ಮಹಿಳೆಯರ ಕುರಿತಂತೆ

ಮಾನಸ ತಿಂಗಳ ಪತ್ರಿಕೆ
ಆಗಸ್ಟ್ 2004
ಸಂಪುಟ : 19
ಸಂಚಿಕೆ : 7

ವಿಳಾಸ :
"ಮಾನಸ" ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ - ಪೋಸ್ಟ್
ಬೆಂಗಳೂರು - 560 067

ಸೂಚನೆ : ಸೂಚನೆ : ಬಿಡಿಪ್ರತಿ 10-00 ರೂ.
ವಾರ್ಷಿಕ ಚಂದಾ 100-00 ರೂ.
ಸಂಸ್ಥೆಗಳಿಗೆ 150-00 ರೂ.

* ಒಂದು ವಿಶೇಷಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು

ಈ ಸಂಚಿಕೆಯಲ್ಲಿ.....

ಮೈಸೂರು

ಮೈಸೂರಿನಲ್ಲಿ ಓದುಗರು ಮಾನಸ ಪ್ರತಿಗಳಿಗಾಗಿ ಹಾಗೂ ಚಂದಾ ನವೀಕರಣಕ್ಕಾಗಿ ಸಂಪರ್ಕಿಸಿ
ವೆಂ.ವನಜ : 2329, 12ನೇ ಮೇನ್, 2ನೇ ಹಂತ ವಿಜಯನಗರ, ಮೈಸೂರು - 570 017

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು : ಮಾನವಿ ಮುದ್ರಣಾಲಯ,
ಪಂಚಾಯಿತಿ ರಸ್ತೆ, ಕಾಡುಗೋಡಿ-ಅಂಚೆ, ಬೆಂಗಳೂರು - 560 067



ಸಂಪಾದಕೀಯ

ನಮ್ಮ ದೇಶದ ರಾಜಕೀಯ ಹಾಗೂ ನ್ಯಾಯಾಂಗ ವ್ಯವಸ್ಥೆಗೆ ಬಹುದೊಡ್ಡ ಸವಾಲನ್ನು ಎಸೆಯುವ ಎರಡು ಬಹುಮುಖ್ಯ ಘಟನೆಗಳು ನಡೆದಿದೆ. ಈ ಎರಡು ಘಟನೆಗಳ ಹಿಂದಿರುವ ಮಹಿಳೆಯರ ಪ್ರತಿಭಟನೆಯ ಸ್ವರೂಪ ಮೂಲಭೂತವಾದ ಹಲವು ಪ್ರಶ್ನೆಗಳನ್ನು ಎತ್ತುತ್ತಿದೆ.

ಮಣಿಪುರದಲ್ಲಿ ಮನೋರಮಾ ದೇವಿಯನ್ನು ಉಗ್ರಗಾಮಿ ಎಂಬ ಶಂಕೆಯಿಂದ ಭಾರತೀಯ ಸೇನೆಯ ಸಿಬ್ಬಂದಿಯವರು ಎಳೆದೊಯ್ದು ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರವನ್ನು ಎಸೆಗಿದರು. ಪುರಾವೆಗಳನ್ನು ನಾಶಪಡಿಸುವ ಉದ್ದೇಶದಿಂದ ಅಮಾನುಷವಾಗಿ ಹಿಂಸಿಸಿ ಆಕೆಯ ದೇಹವನ್ನು ರಸ್ತೆಯ ಮೇಲೆ ಎಸೆಯಲಾಗಿತ್ತು. ಇದು ಮಗಿಪುರದ ಮಹಿಳೆಯರನ್ನು ಸಂಪೂರ್ಣವಾಗಿ ಕೆರಳಿಸಿತು. ಮಣಿಪುರದ ಮಹಿಳೆಯರು ಭಾರತೀಯ ಸೇನೆಯ ದೌರ್ಜನ್ಯವನ್ನು ಪ್ರತಿಭಟಿಸಲು ಸಂಪೂರ್ಣವಾಗಿ ನಗ್ನರಾಗಿ "ಬನ್ನಿ ನಮ್ಮ ಮೇಲೆ ಅತ್ಯಾಚಾರ ಎಸಗಬನ್ನಿ" ಎಂದು ಒಕ್ಕೊರಲಿನಿಂದ ಪ್ರತಿಭಟಿಸಿದರು. ಈ ಪ್ರತಿಭಟನೆಯ ಸ್ವರೂಪ ಮಣಿಪುರದ ಮಹಿಳೆಯರ ಅಂತರಾಳದಲ್ಲಿ ಅಡಗಿರುವ ನೋವಿನ ಅಭಿವ್ಯಕ್ತಿಯಾಗಿದೆ. ಅಸ್ಸಾಂ ರೈಫಲ್ಸ್‌ನ್ನು ವಾಪಸ್ಸು ಕರೆಸಿಕೊಳ್ಳುವುದು ಹಾಗು ಸೈನ್ಯಕ್ಕೆ ನೀಡಿದ ವಿಶೇಷಾಧಿಕಾರವನ್ನು ವಾಪಸ್ಸು ಪಡೆಯಬೇಕೆಂಬ ಬೇಡಿಕೆಯಿಂದ ಮಣಿಪುರದ ಜನತೆ ಹೋರಾಟ ಮಾಡುತ್ತಿದ್ದಾರೆ.

ಹದಿನಾಲ್ಕು ವರ್ಷಗಳ ಕಾಲ, ರೌಡಿಯೊಬ್ಬನ ದಬ್ಬಾಳಿಕೆಯಲ್ಲಿ ನಲುಗಿದ ಮಹಿಳೆಯರು ಕಾನೂನನ್ನು ಕೈಗೆತ್ತಿಕೊಳ್ಳುವುದರ ಮೂಲಕ ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಅಮಾಯಕ ಜನರು ಪಡೆಯ 'ನ್ಯಾಯ'ಕ್ಕೆ ಸವಾಲಿಸಿದ್ದಾರೆ. ಆರೋಪಿಯನ್ನು ನ್ಯಾಯಾಂಗ ಕೊಠಡಿಯಲ್ಲಿ ಹೊಡೆದು ಸಾಯಿಸುವುದರ ಮೂಲಕ ಆತನ ದೌರ್ಜನ್ಯಕ್ಕೆ ಕೊನೆ ಹಾಕಿದ್ದಾರೆ.

ಈ ಎರಡು ಘಟನೆಗಳಲ್ಲಿ ಮಹಿಳೆಯರು ಆಕ್ರೋಶದ ಹಿಂದೆ ಹತಾಷೆಯ ಭಾವನೆಯಿರುವುದು ಸಹಜ. ಈ ಹತಾಷೆಯ ಹಿಂದಿರುವ ಪ್ರಶ್ನೆಗಳು ಗಹನವಾಗಿದೆ. ಮಹಿಳೆಯರು ಮೂಲಭೂತ ಹಕ್ಕುಗಳು ನಮ್ಮ ನಡುವಿನ ರಾಜಕೀಯ, ಆರ್ಥಿಕ, ನ್ಯಾಯಾಂಗ ವ್ಯವಸ್ಥೆ, ಅವುಗಳ ಕಾರ್ಯ ವೈಖರಿಗೆ ಹೇಗೆ ತಳುಕು ಹಾಕಿ ಕೊಂಡಿದೆ ಎಂಬುದು ಸ್ಪಷ್ಟ.

- ಸಂಪಾದಕ ಮಂಡಳಿ

ಕಾಣೆಯಾಗುತ್ತಿರುವ ಹೆಣ್ಣು ಮಗು

ಭಾರತದ ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಹೆಣ್ಣು ಮಕ್ಕಳನ್ನು ಹೊರೆ (ತೊಂದರೆ) ಎಂದೇ ಭಾವಿಸಿದ್ದರು. ವಯಸ್ಸಿಗೆ ಬಂದಾಗ ಆಗುವ ಖರ್ಚು, ಮದುವೆ, ವರದಕ್ಷಿಣೆ, ಇವೆಲ್ಲವೂ ಪೋಷಕರಿಗೆ ಹೊರೆ ಎಂದೇ ಭಾವಿಸಲಾಗುತ್ತಿತ್ತು. ಗಂಡು ಮಕ್ಕಳು ಎಂದರೆ ಮನೆಯ ಜವಬ್ದಾರಿಯನ್ನು ಹೊತ್ತುಕೊಂಡು ಸಂಪಾದನೆ ಮಾಡುವವನು, ಮನೆಯ ಅಭಿವೃದ್ಧಿಗೆ ಕಾರಣಕರ್ತನು, ಹೆಣ್ಣು ಮಕ್ಕಳು ಮನೆಯ ಆಸ್ತಿಯನ್ನು ಕಡಿಮೆ ಮಾಡುವರು, ಇದಕ್ಕೆ ಹೆಣ್ಣು ಮಕ್ಕಳ ಹೊರೆಯನ್ನು ಕಡಿಮೆಮಾಡಿಕೊಳ್ಳಬೇಕೆಂದೇ ಹೆಣ್ಣು ಶಿಶುವನ್ನು ಸಾಯಿಸುವುದು ಅಥವಾ ಗರ್ಭಪಾತ ಮಾಡುತ್ತಿದ್ದರು. ಅರ್ಧ ಶತಮಾನ ಕಳೆದುಹೋಗಿ ದೇಶವು ಅಭಿವೃದ್ಧಿ ಹೊಂದುತ್ತಿದ್ದು, ಸಂಸ್ಕೃತಿಯಲ್ಲೇ ಬದಲಾವಣೆ-ಯಾಗುತ್ತಿದ್ದರೂ ಈಗಲೂ ಕೂಡ ಇದೇ ನಂಬಿಕೆ ಮುಂದುವರೆದಿದೆ. ಶಿಕ್ಷಣ ನಗರೀಕರಣವಾಗುತ್ತಿದೆ, ದೇಶವೂ ಅಭಿವೃದ್ಧಿ ಹೊಂದುತ್ತಿದೆ. ತಂತ್ರಜ್ಞಾನದ ಬಳಕೆಯಲ್ಲಿ ಹೊಸ ಅವಿಷ್ಕಾರವಾಗುತ್ತಿದೆ. ಲಿಂಗ ಪರೀಕ್ಷಾ ವಿಧಾನವೂ ಸುಲಭವಾಗಿದೆ. ವೈಜ್ಞಾನಿಕವಾಗಿ ಆಧುನಿಕವಾಗುತ್ತಿದ್ದರೂ ಹೆಣ್ಣು ಮಕ್ಕಳು ಎಂದರೆ ಹೊರೆ ಎಂದೇ ತಿಳಿದುಕೊಳ್ಳುವುದು, ಸಾಯಿಸುವುದು, ಶೋಷಣೆ ಮಾಡುವುದು ಮುಂದುವರೆದಿದೆ. ಮಕ್ಕಳ ಆಯ್ಕೆಯಲ್ಲಿ ಈಗಲೂ ಗಂಡು ಮಗು ಬೇಕೆಂಬ ಬೇಡಿಕೆ ಮುಂದುವರೆದಿದೆ.

ಕಥೆ, ಕಾದಂಬರಿ, ಚಲನಚಿತ್ರಗಳಲ್ಲಿ ಹೆಣ್ಣುಮಕ್ಕಳ ಸಮಸ್ಯೆ ಮೂಲವಸ್ತುವಾಯಿತು. ಚಂದ್ರ ಪ್ರಕಾಶ ದ್ವಿವೇದಿ ಎಂಬ ಚಲನಚಿತ್ರಕಾರ ಅಮೃತ್ ಪ್ರೀತಮ್‌ರ ಪಿಂಜಾರ್ (Pinjar) ಕಾದಂಬರಿ ಆಧರಿಸಿ ಚಲನಚಿತ್ರದಲ್ಲಿ ಇದೇ ಸಮಸ್ಯೆಯನ್ನು ಎತ್ತಿಹಿಡಿದಿದ್ದಾರೆ. ಅದರಲ್ಲಿ ಅಮೃತಸರದ ಶ್ರೀಮಂತ ಜಮೀನ್ದಾರಿ ಕುಟುಂಬದಲ್ಲಿ ಮೂರು ಹೆಣ್ಣುಮಕ್ಕಳು ಇರುತ್ತಾರೆ. ಬಹಳ ವರ್ಷಗಳ ನಂತರ ಗಂಡುಮಗುವಾದ ಮೇಲೆ ಅವರಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಅದೇ ಸಮಯದಲ್ಲಿ ಹಿರಿಯ ಮಗಳನ್ನು ಮುಸ್ಲಿಂ ಹುಡುಗನು ಅಪಹರಿಸುತ್ತಾನೆ. ಆದರೆ ಅವಳು ಅವನಿಂದ ತಪ್ಪಿಸಿಕೊಂಡು ಮತ್ತೆ ಮನೆಗೆ ಬಂದರೆ ತಂದೆ ತಾಯಿ ಅವಳನ್ನು ನೋಡುವ ರೀತಿಯೇ ಕೆಟ್ಟದ್ದಾಗಿರುತ್ತದೆ. ನೀನು ಮತ್ತೆ ಇಲ್ಲಿಗೇಕೆ ಬಂದೆ? ಎಲ್ಲಿಯಾದರೂ ಹೋಗು. ಆದರೆ ಇಲ್ಲಿ ಮಾತ್ರ ಇರಬೇಡ. ನೀನು ಹೆಣ್ಣು, ಅಪಹರಣವಾಗಿರುವ ನಿನ್ನನ್ನು ನಾವು ಮತ್ತೆ ಮನೆಗೆ ಸೇರಿಸಿಕೊಂಡರೆ ನಮ್ಮ ಮರ್ಯಾದೆ ಹೋಗುತ್ತದೆ. ನೀನು ಹುಟ್ಟುವುದಕ್ಕೆ ಮುಂಚೆಯೇ ಸಾಯಬಾರದಿತ್ತೆ ಎಂದು ಹೇಳುತ್ತಾರೆ.

ಇದು ಕೇವಲ ಕಥೆ ಮಾತ್ರ ಅಲ್ಲ. ಹೆಣ್ಣನ್ನು ಕಾಣುತ್ತಿದ್ದ ರೀತಿಯೇ ಹೀಗೆ. ಒಂದು ಬಾರಿ ಮನೆಯಿಂದ ಹೊರಗೆ ಹೋಗಿ ಮತ್ತೆ ಬಂದರೆ ಅವಳನ್ನು ನಿಕೃಷ್ಟವಾಗಿ ನೋಡುತ್ತಿದ್ದರು. ಅವಳಿಗೆ ಸಾಯುವುದೇ ಕೊನೆಯ ನಿರ್ಧಾರವಾಗುವಂತೆ ಮಾಡುತ್ತಿದ್ದರು.

ಭಾರತದ ಕೆಲವು ರಾಜ್ಯಗಳಲ್ಲಿ ದೆಹಲಿ, ಪಂಜಾಬ್, ಹರಿಯಾಣ ಮತ್ತು ಗುಜರಾತ್‌ಗಳಲ್ಲಿ 2001 ರ ಜನಗಣತಿಯ ಪ್ರಕಾರ 0-6 ವಯಸ್ಸಿನ ಮಕ್ಕಳ ಲಿಂಗ ಪ್ರಮಾಣದಲ್ಲಿ 1000 ಗಂಡು ಮಕ್ಕಳಿಗೆ ಅತೀ ಕಡಿಮೆ ಹೆಣ್ಣು ಮಕ್ಕಳಿದ್ದಾರೆ. ಕೆಲವು ನಗರಗಳಲ್ಲಿ ಅತಿ ಹೆಚ್ಚು ಪ್ರಮಾಣದಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾಗಿರುವುದನ್ನು ಕಾಣಬಹುದಾಗಿದೆ. ಸೌತ್‌ವೆಸ್ಟ್ ದೆಹಲಿಯಲ್ಲಿ ಅಭಿವೃದ್ಧಿ ಹೊಂದಿದ್ದ ವಿದ್ಯಾವಂತ ಜನರು ಇರುವ ಪ್ರದೇಶದಲ್ಲಿಯೂ ಕೂಡ ಮಕ್ಕಳ ಲಿಂಗ ಪ್ರಮಾಣವೂ 1991ರಲ್ಲಿ 904 ಕ್ಕೆ 845 ಕ್ಕೆ ಇಳಿದಿದೆ.

ಮುಂಬೈ ಮತ್ತು ದೆಹಲಿಯಲ್ಲೂ ಲಿಂಗ ಪ್ರಮಾಣವೂ ರಾಷ್ಟ್ರೀಯ ಗಣತಿಯ ಪ್ರಕಾರ 1000 ಹುಡುಗರಿಗೆ 927 ಹುಡುಗಿಯರು ಇದ್ದಾರೆ. ಭಾರತದ ನಗರಗಳಲ್ಲಿ ಹುಡುಗಿಯ ಜನಸಂಖ್ಯೆಯು 23 ಪಟ್ಟಣಗಳಲ್ಲಿ ಕಡಿಮೆಯಾಗಿರುವುದನ್ನು ಕಾಣುತ್ತೇವೆ.

16 ರಾಜ್ಯಗಳಲ್ಲಿ ಮತ್ತು ರಾಷ್ಟ್ರೀಯ ಸಂಯೋಗದಲ್ಲಿ 70 ಜಿಲ್ಲೆಗಳಲ್ಲಿ 1991 ಮತ್ತು 2001 ಪ್ರಕಾರ ಹುಡುಗಿಯರ ಜನಸಂಖ್ಯೆಯಲ್ಲಿ ಅಪ್ರಮಾಣವಾಗಿ ಇಳಿದಿರುವುದನ್ನು ಕಾಣಬಹುದಾಗಿದೆ.

ನಗರದ ದುಷ್ಕೀರ್ತಿ

1991 ರಿಂದ 2001 ವರೆಗೆ ಲಿಂಗದ ಪ್ರಮಾಣವು 0-6 ವಯಸ್ಸಿನವರೆಗೆ ನಗರದ ಕೇಂದ್ರಗಳಲ್ಲಿ ಇಳಿಮುಖವಾಗಿರುವುದನ್ನು ಕಾಣಬಹುದಾಗಿದೆ. ದೆಹಲಿ ಮತ್ತು ಮುಂಬೈನಲ್ಲಿ ದುಷ್ಕೀರ್ತಿಯು ಅತಿಯಾಗಿದೆ.

ಪ್ರಮುಖ ನಗರಗಳು	ಗಂಡುಮಕ್ಕಳು (ಇಸವಿ)	ಹೆಣ್ಣುಮಕ್ಕಳು (ಇಸವಿ)
	1991	2001
ದೆಹಲಿ	904	850
ಮುಂಬೈ	942	898
ಪೂನಾ	943	906
ಅಮೃತ್ ಸರ್	861	783
ಪಾಟಿಯಾಲ	871	770
ಅಂಬಾಲ	888	784
ಗುರ್‌ಗೋನ್	895	863
ಫರೀದಾಬಾದ್	884	856
ಕುರುಕ್ಷೇತ್ರ	868	770
ಅಹಮದಬಾದ್	896	814
ವದೋಧರ	934	873
ರಾಜ್‌ಕೋತ್	914	844
ಜೈಪುರ್	925	897
ಇಡೀ ಭಾರತ	945	927

ಈ ಅಂಕಿಯು 1000 ಹುಡುಗರಿಗೆ ಹುಡುಗಿಯರ ಸಂಖ್ಯೆಯನ್ನು ಹೇಳುತ್ತದೆ.

ಸಮೃದ್ಧವಾಗಿರುವ ಮತ್ತು ಅಭಿವೃದ್ಧಿ ಹೊಂದುತ್ತಿರುವ ನಗರ ಪ್ರದೇಶದಲ್ಲಿಯೂ 1000 ಹುಡುಗರಿಗೆ ಹುಡುಗಿಯರ ಪ್ರಮಾಣವು ಇಳಿಮುಖವಾಗಿರುವುದನ್ನು ಇದರಿಂದ ತಿಳಿಯಬಹುದಾಗಿದೆ. ಈ ಸಮೀಕ್ಷೆಯು 2001ರ ಭಾರತೀಯ ಜನಗಣತಿ ಆಧಾರದಿಂದ ತಿಳಿದು ಬಂದಿರುವುದು.

ಎಲ್ಲಿಯವರೆಗೆ ಸಮಾಜದಲ್ಲಿ ಗಂಡು ಮಕ್ಕಳು ಮಾತ್ರ ಕುಟುಂಬವನ್ನು ಕಾಪಾಡುತ್ತಾನೆ ಎಂಬ ನಂಬಿಕೆ ಇರುತ್ತದೆಯೋ ಅಲ್ಲಿಯವರೆಗೆ ಈ ಶೋಷಣೆ ನಿಲ್ಲುವುದಿಲ್ಲ. ಶಿಕ್ಷಣದಲ್ಲಿ ಪ್ರಗತಿಯಾದರೂ ಮಗ ಮಾತ್ರ ಕುಟುಂಬದಲ್ಲಿ ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಅವನೇ ಎಲ್ಲಾ ಸಮಸ್ಯೆಯನ್ನು ಪರಿಹರಿಸಿಕೊಳ್ಳುತ್ತಾನೆ ಎಂಬ ನಂಬಿಕೆ ಮುಂದುವರೆದಿದೆ.

ಹೆಣ್ಣು ಶಿಶುವಿನ ಭ್ರೂಣ ಹತ್ಯೆ ಎಂಬುದು ಭಾರತದಲ್ಲಿ ಹೆಣ್ಣಿನ ವಿರುದ್ಧ ಇರುವ ಧಾರ್ಮಿಕ ನಂಬಿಕೆಯಾಗಿದೆ. ಇದು ಒಂದು ವಿವಾದಾಸ್ಪದ ವಿಷಯವಾಗಿದೆ ಎಂದು ಭಾರತದ ಮೆಡಿಕಲ್ ಡೈರೆಕ್ಟರ್ ಕುಟುಂಬ ಯೋಜನೆ ಸಂಸ್ಥೆಯವರಾದ ಡಾ॥ಸುಚಿತ್ರ ದಾಲಾವಿ ಹೇಳುತ್ತಾರೆ. ನಗರ ಪ್ರದೇಶದಲ್ಲಿ ಶಿಕ್ಷಣವನ್ನು ಪಡೆದಿದ್ದರೂ ಆಯ್ಕೆ ವಿಷಯಕ್ಕೆ ಬಂದರೆ ಅದು ಗಂಡುಮಗುವೇ ಆಗಿರುತ್ತದೆ. ಇದು ಒಂದು ದುರಂತವೇ ಆಗಿದೆ. ಸವಿತ ದಿನ್‌ಗರ್ 27 ವರ್ಷದ ಮೆಕ್ಯಾನಿಕಲ್ ಇಂಜಿನಿಯರ್. ಮೊದಲನೆಯ ಮಗು ಗಂಡು ಮಗುವಾಗಿರಬೇಕು ಎಂದು ಮದುವೆಯಾದ ಮೇಲೆ ಮೂರು ಗರ್ಭಪಾತ ಮಾಡಿಸಿಕೊಂಡಳು. ಹೆಣ್ಣು ಶಿಶು ಎಂಬ ಕಾರಣಕ್ಕೆ ಗರ್ಭಪಾತ ಮಾಡಿಸಿಕೊಂಡಳು. 'ನನಗೆ ಮೊದಲನೆ ಮಗು ಗಂಡು ಮಗುವಾಗಬೇಕು. ಇದರಲ್ಲೇ ಹೆಣ್ಣಿನ ಗೌರವವಿದೆ' ಎಂದು ಹೇಳುತ್ತಾಳೆ, ಈ ರೀತಿಯಲ್ಲೇ ನೂರಾರು ಕೇಸ್‌ಗಳನ್ನು ನೋಡಬಹುದಾಗಿದೆ.

ಶಿಕ್ಷಣ, ಪ್ರಚಾರ, ಸಂಪತ್ತು, ಸಮಾನತೆಯನ್ನು ಕೊಟ್ಟಿಲ್ಲ. ಮುಂಬೈನ ಸೋಶಿಯಲ್ ಸೈನ್ಸ್ ಟಾಟಾ ಇನ್‌ಸ್ಟಿಟ್ಯೂಟ್-ನಲ್ಲಿರುವ ಫ್ಯಾಮಲಿ ಯುನಿಟ್‌ನ ಮುಖ್ಯಸ್ಥರಾದ ಮುರಳಿ ದೇಸಾಯಿ ಹೇಳುವುದೇನೆಂದರೆ ಈಗ ಸಂಬಂಧದಲ್ಲಿ ವ್ಯಯ ಮಾಡುವ ಮತ್ತು ವ್ಯಾಪಾರದ ಮನೋಭಾವವನ್ನು ಹೆಚ್ಚಿದೆ. ಗಂಡು ಮಕ್ಕಳು ಮಾತ್ರ ಸಂಸಾರದಲ್ಲಿ ಆಸ್ತಿಯನ್ನು ಹೆಚ್ಚಿಸಲು, ಗೌರವವನ್ನು ಹೆಚ್ಚಿಸಲು ಸಾಧ್ಯ ಎಂಬುದು ಹೆಂಗಸರ ಅಭಿಪ್ರಾಯವಾಗಿದೆ. ತಂತ್ರಜ್ಞಾನದ ಬಳಕೆಯು ಮುಂದುವರೆದಂತೆ ಲಿಂಗ ಪರೀಕ್ಷೆ ಮತ್ತು ಗರ್ಭಪಾತ ವಿಧಾನದಲ್ಲಿ ಹೊಸ ತಂತ್ರಜ್ಞಾನವೂ ಹೆಂಗಸರಿಗೆ ದೈಹಿಕವಾಗಿ ಶಕ್ತಿಯನ್ನು ಕೊಟ್ಟಿದೆ. ಆದರೆ ಗರ್ಭಿಣಿ ಸ್ತ್ರೀ ವೈಜ್ಞಾನಿಕ ವಿಧಾನವನ್ನು ಅಳವಡಿಸಿಕೊಳ್ಳುವುದರಿಂದ ಎರಡು ಮಕ್ಕಳು ಆದ ನಂತರವೂ ಲಿಂಗ ಪರೀಕ್ಷೆ ಮಾಡುವ ವಿಧಾನದಿಂದ ಗಂಡು ಮಗುವನ್ನು ಪಡೆಯುತ್ತಾರೆ.

ಈ ತಂತ್ರಜ್ಞಾನ ಅಳವಡಿಕೆಯಲ್ಲಿ ಹೊಸ ವಿಧಾನವನ್ನು ಬಳಸುವುದರಿಂದ ಭ್ರೂಣಹತ್ಯೆ ಎಂಬುದು ಹೆಚ್ಚಾಗಿದೆ. ಎರಡು ವರ್ಷದಲ್ಲಿ ಭಾರತ ಸರ್ಕಾರವು ಕಂಡುಕೊಂಡ ಪ್ರಕಾರ ದೆಹಲಿಯಲ್ಲಿ ಉಪಕರಣಗಳನ್ನು ಮಾರಿ ಸಾಮಾಗ್ರಿಗಳನ್ನು ಅತಿ ಕೆಟ್ಟ ಪ್ರಮಾಣದಲ್ಲಿ ನಿಷ್ಟೆಯಿಲ್ಲದೆ ಬಳಸುತ್ತಾರೆ. ದೆಹಲಿಯಲ್ಲಿ

ಅಲ್ಟ್ರಾ ಸೌಂಡ್ ಮೆಷಿನ್ 700 ಇದ್ದರೆ ಇಡೀ ಭಾರತದಲ್ಲಿ 21,000 ಅಲ್ಟ್ರಾ ಸೌಂಡ್ ಮೆಷಿನ್ ರೆಜಿಸ್ಟರ್ ಆಗಿದೆ. 400 ಕೇಸ್‌ಗಳು ಜಪ್ತಿಯಾಗಿವೆ. ಏಕೆಂದರೆ ಸರ್ಕಾರದಲ್ಲಿ ಅದು ರಿಜಿಸ್ಟರ್ ಆಗಿಲ್ಲ. 40-50 ಕೇಸ್‌ಗಳು ಹಲವು ಕೇಂದ್ರಗಳಲ್ಲಿ ಲಿಂಗ ನಿರ್ಣಯ ಪರೀಕ್ಷೆಯಲ್ಲಿ ಜಾಹೀರಾತುಗಳನ್ನು ಕೊಟ್ಟಿದೆ. ಗರ್ಭಪಾತ ಮಾಡಲು MT pill & Misprost ಮಾತ್ರೆಗಳು ಇದ್ದು ವೈದ್ಯರ ಸಲಹೆಯಿಲ್ಲದೆ ಅದನ್ನು ತೆಗೆದುಕೊಳ್ಳುವಂತಿಲ್ಲ. ಮೆಡಿಕಲ್ ಸಲಹೆಯ ಮೇರೆಗೆ ತೆಗೆದುಕೊಂಡರೆ ಅತಿಯಾದ ರಕ್ತಸ್ರಾವಾಗಿ Septicaemia ದಿಂದ ಸಾಯಲುಬಹುದು. ಇಂಡಿಯಾಟುಡೇ ದೆಹಲಿಯಲ್ಲಿ ಸಮೀಕ್ಷೆ ಮಾಡಿದಾಗ ಔಷಧಿ ಅಂಗಡಿಯಲ್ಲಿ ಅನುಮತಿ ಪಡೆದ ವೈದ್ಯರ ಔಷಧ ಚೀಟಿಯನ್ನು ನೋಡದೆ ಇವುಗಳನ್ನು ಕೊಡುತ್ತಾರೆ.

ನಿಯಮಗಳನ್ನು ಮುರಿಯುವುದು

ಎರಡು ದಶಕಗಳ ಹಿಂದೆ ಕುಟುಂಬದಲ್ಲಿ ಮಗನೇ ಉತ್ತರಾಧಿಕಾರಿ ಎಂಬ ಮನೋಭಾವವನ್ನು ಹೋಗಲಾಡಿಸಲು ಲಿಂಗ ನಿರ್ಣಯ ಪರೀಕ್ಷೆಯನ್ನು ವೈದ್ಯರು ಬಹಿರಂಗವಾಗಿ ಮಾಡುತ್ತಿದ್ದರು. ಆದರೆ 1990 ರಲ್ಲಿ ಮುಂಬೈನಲ್ಲಿ ಮಲ್‌ಪಾನಿ ಕ್ಲಿನಿಕಾನ್ ಡಾ॥ ಅನಿರ್ುದ್ಧ ಮಲ್‌ಪಾನಿ ವೆಬ್‌ಸೈಟ್ ಮೂಲಕ ಜಾಹೀರಾತನ್ನು ಕೊಟ್ಟು ಗಂಡು ಮಗುವನ್ನು ಪಡೆಯುವಂತೆ ಸಲಹೆ ಕೊಡುತ್ತಿದ್ದನು. ಈಗ ಮಲ್‌ಪಾನಿ ರೋಗ ನಿರೋಧಕ ತಂತ್ರಜ್ಞಾನವನ್ನು ದುರುಪಯೋಗ ಮಾಡಿಕೊಂಡಿದ್ದಕ್ಕೆ ಕ್ರಿಮಿನಲ್ ಮೊಕ್ಕದ್ದಮೆ -ಯನ್ನು ಅನುಭವಿಸುತ್ತಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಎಲ್ಲಾ ವಿಷಯದಲ್ಲೂ ಆಯ್ಕೆಯ ಸ್ವತಂತ್ರ್ಯವಿದೆ. ಆದರೆ ಎಷ್ಟು ಜನ ಈ ಉಪಕರಣಗಳನ್ನು ಬಳಸಲು ಸಾಧ್ಯ ? ಕೇವಲ ಶ್ರೀಮಂತರು ಮಾತ್ರ ಇದನ್ನು ಉಪಯೋಗಿಸಬಹುದು ಎಂದು ಆತ ಹೇಳುತ್ತಾನೆ.

ಅಂಕಿ ಅಂಶಗಳ ಪ್ರಕಾರ ಗಂಡಸರ ಸಂಖ್ಯೆ ಹೆಚ್ಚಾಗುತ್ತಿದೆ. ಇದಕ್ಕೆ ಜನರ ಮೂಢ ನಂಬಿಕೆಯಿದ್ದರೂ ವೈದ್ಯರು ಇದಕ್ಕೆ ಪುರಸ್ಕರಿಸುವುದು ತಪ್ಪು. ವೈದ್ಯಕೀಯ ನೀತಿ ಸೋಲದಿದ್ದರೆ ಹುಡುಗಿಯರ ಸಂಖ್ಯೆ ಕಡಿಮೆಯಾಗುತ್ತಿರಲಿಲ್ಲ ಎಂದು ಜಾರ್ಜ್ ಹೇಳುತ್ತಾರೆ. ಅವರು ಸುಮಾರು 19 ವರ್ಷಗಳ ಕಾಲ ಇದರ ವಿರುದ್ಧ ಹೋರಾಟ ನಡೆಸಿದ್ದರು. ಡಾ॥ರಾಹುಲ್ ಮನ ಚಂದರವರು ಗರ್ಭಪಾತ ವಿರುದ್ಧ ಹೋರಾಟ ನಡೆಸಿ, ನಂತರ ವೃತ್ತಿಯನ್ನು ತ್ಯಜಿಸಿ ಸ್ತ್ರೀರೋಗ ತಜ್ಞರಾಗಿ ಮಾತ್ರ ವೃತ್ತಿ ಮುಂದುವರಿಸಿದರು.

ವೈದ್ಯರು ಗಂಡು ಮಕ್ಕಳು ಬೇಕು ಎಂದು ಹಿಂಸೆ ಕೊಡುವವರ ವಿರುದ್ಧ ಹೋರಾಡಿ ಸ್ತ್ರೀಯರಿಗೆ ರಕ್ಷಣೆ ಕೊಡಬೇಕು. ಆದರೆ ಆ ಕರ್ತವ್ಯವನ್ನು ಮರೆತು ಹಣಮಾಡುವ ಯೋಜನೆಯಲ್ಲಿಯೇ ಇರುತ್ತಾರೆ. ಮೆಡಿಕಲ್ ಟರ್ಮಿನೇಷನ್ ಆಫ್ ಪ್ರಗ್ನೆನ್ಸಿ ಕಾಯ್ದೆ ಪ್ರಕಾರ 12 ವಾರದಿಂದ 20 ವಾರದ ಬಳಿಕ ಗರ್ಭಿಣಿ ಸ್ತ್ರೀಯರಿಗೆ ಗರ್ಭಪಾತ ಮಾಡಬಹುದಾಗಿದೆ. ಆದರೆ ಈ ಕಾಯ್ದೆಯನ್ನು ದುರುಪಯೋಗ ಮಾಡಿಕೊಂಡು ಭಾರತದಲ್ಲಿ ವ್ಯಾಪಾರ ಮನೋವೃತ್ತಿನ್ನು ಮಾಡಿಕೊಳ್ಳಲಾಗಿದೆ. ಬೇರೆ ಬೇರೆ ಕಾರಣಗಳನ್ನು ನೀಡಿ ವೈದ್ಯರು ಗರ್ಭಪಾತ ಮಾಡಿ ಹಣವನ್ನು ಸಂಪಾದನೆ ಮಾಡುತ್ತಾರೆ. ನಗರ ಪ್ರದೇಶದಲ್ಲಿ ಗರ್ಭಪಾತ ಮಾಡುವುದಕ್ಕೆ ಸುಮಾರು 3,000 ರಿಂದ 30,000 ದವರೆಗೆ ಖರ್ಚಾಗುತ್ತದೆ.

ಲಿಂಗ ನಿರ್ಣಯವನ್ನು ಒಂದು ಕಡೆ ಮಾಡಿ ಗರ್ಭಪಾತ ಇನ್ನೊಂದುಕಡೆ ಮಾಡುವುದರಿಂದ ಹೆಣ್ಣು ಶಿಶುವಿನ ಭ್ರೂಣ ಹತ್ಯೆಯನ್ನು ಮಾಡಲು ರೋಗಿಗಳಿಗೆ ಸುಲಭವಾಗುತ್ತಿದೆ ಎಂದು ಗೈನೋಕಾಲಜಿಸ್ಟ್ ಡಾ॥ಬಿಂದುಸೂರಿ ಹೇಳುತ್ತಾರೆ. ದೆಹಲಿಯ ಅಪೋಲೊ ಆಸ್ಪತ್ರಯ Dr. ಸೋಹಾನಿ ವರ್ಮರ ಪ್ರಕಾರ ಗರ್ಭಪಾತ ಮಾಡುವಾಗ ಆಗುವ ಅನೇಕ ತೊಂದರೆಗಳಿಂದ ಭಾರತದಲ್ಲಿ ಹೆಂಗಸರ ಸಂಖ್ಯೆ ಕಡಿಮೆಯಾಗಲು ಕಾರಣವಾಗಿದೆ.

ರೋಗಿಗಳ ಮನೋಸ್ಥೈರ್ಯವನ್ನು ಅರಿತುಕೊಂಡು ವೈದ್ಯರು ಕೆಲವು ಕೋಡ್ ಪದಗಳನ್ನು ಬಳಸುತ್ತಾರೆ ಎಂದು ಸಹಾಗಲ್ ಹೇಳುತ್ತಾರೆ. ಆಕಾಶ ನೀಲಿಯಾಗಿದೆ ಮತ್ತು ನಿಮ್ಮ ಮಗು ಚೆನ್ನಾಗಿದೆ. ಅದು ಪುಟ್‌ಬಾಲ್ ಆಡುತ್ತದೆ. ಅದು ಗಂಡು ಮಗು ಆಗಿದೆ ಎಂದು ಹೇಳಲು ಅಥವಾ ನಿಮ್ಮ ಆರೋಗ್ಯ ಗುಲಾಬಿ ಬಣ್ಣವಾಗಿದೆ ಮತ್ತು ನಿಮ್ಮ ಮಗು ಗೊಂಬೆಯಾಗಿದೆ ಎಂದರೆ ಹೆಣ್ಣು ಮಗುವಾಗಿದೆ ಎಂದು ತಿಳಿಸಲು ಈ ರೀತಿ ಸಂದೇಶವಾಕ್ಯವನ್ನು ಬಳಸುತ್ತಾರೆ.

ಹರಡುತ್ತಿರುವ ಬೆದರಿಕೆಗಳು :

2001 ಏಪ್ರಿಲ್‌ನಲ್ಲಿ ಸಿಖ್ ಪಂಥದ ಅಕಲ್ ತಾಕಿ ತೀರ್ಪಿನ ಮೇಲೆ ಹೆಣ್ಣು ಮಗುವಿನ ಭ್ರೂಣಹತ್ಯೆಯನ್ನು ನಿಲ್ಲಿಸುವಂತೆ ಆಜ್ಞೆ ಮಾಡಲಾಯಿತು. ಅಂಥವರನ್ನು ಕುದಿಮಾರ್ (Kudimar) ಗುಂಪಿಗೆ ಸೇರಿಸಿ ದಂಡವನ್ನು ವಿಧಿಸಲಾಗುತ್ತದೆ ಎಂದು ಕಾಯ್ದೆ ಬಂದಿತು. ಆದರೆ ಇದುವರೆಗೆ ಈ ರೀತಿ ಮಾಡಿದವರಿಗೆ ಯಾವ ಶಿಕ್ಷೆಯನ್ನು ವಿಧಿಸಿದ ಒಂದು ಕೇಸ್‌ಗಳು ಬರಲಿಲ್ಲ. ಜೊತೆಗೆ ಈಗಲೂ ಹೆಣ್ಣು ಶಿಶು ಹತ್ಯೆಯೂ ನಡೆಯುತ್ತಲೇ ಇದೆ.

ಪಂಜಾಬ್‌ನಲ್ಲಿ ಹೆಣ್ಣು ಮಕ್ಕಳನ್ನು ಹೊರೆ, ಜವಬ್ದಾರಿ ಎಂದೇ ಸಾಕಲಾಗುತ್ತದೆಯೆ ಹೊರತು ಪ್ರೀತಿಯಿಂದ ಅಲ್ಲ, ಅಲ್ಲಿ ಗಂಡು ಮಗುವಿನ ಜನನಕ್ಕೆ ಕೊಡುವ ಆದ್ಯತೆಯನ್ನು ಇವರಿಗೆ ಕೊಡುತ್ತಿಲ್ಲ ಎಂದು ಪಂಜಾಬ್ ವಿಶ್ವವಿದ್ಯಾಲಯ ಸಮಾಜ ತಜ್ಞ ರಾಜೇಶಾಗಿಲ್ ಹೇಳುತ್ತಾರೆ.

ಚಂಡೀಗಡದ ಇನ್‌ಸ್ಟಿಟ್ಯೂಟ್ ಆಫ್ ಡೆವಲಪಮೆಂಟ್ ಆ್ಯಂಡ್ ಕಮ್ಯೂನಿಕೇಶನ 2002 ವರದಿಯ ಪ್ರಕಾರ 92 % ರಷ್ಟು ಶ್ರೀಮಂತ ವಿದ್ಯಾವಂತ ಜನರು ಲಿಂಗ ನಿರ್ಣಯ ಪರೀಕ್ಷೆಯನ್ನು ಮಾಡಿಸಿ ಕೊಂಡಿದ್ದಾರೆ. ಕಾನೂನುಬಾಹಿರ ಎಂದು ತಿಳಿದಿದ್ದರೂ 77% ರಷ್ಟು ಜನರು ಹೆಣ್ಣು ಮಗುವಿನ ಭ್ರೂಣಹತ್ಯೆ ಮಾಡಿದ್ದಾರೆ. ಅಪರಾಧ ಎಂದು ತಿಳಿದಿದ್ದರೂ 43% ರಷ್ಟು ಜನರ ಪ್ರಕಾರ ಗಂಡು ಮಕ್ಕಳು ಸಂಪಾದನೆ ಮಾಡಿಕೊಡುವವನು ಎಂದು ನಿರೀಕ್ಷಿಸುತ್ತಾರೆ. 38% ರಷ್ಟು ಜನ ಅವರೆ ನಮ್ಮನ್ನು ಕಾಪಾಡುತ್ತಾನೆ ಎಂದು ನಂಬಿಕೊಂಡಿದ್ದಾರೆ. 55% ರಷ್ಟು ನಗರದ ಮಧ್ಯಮ ವರ್ಗಕ್ಕೆ ಸೇರಿದ ಪಂಜಾಬಿ ಕುಟುಂಬದಲ್ಲಿ ಹೆಣ್ಣು ಎಂದರೆ ತೊಂದರೆ ಎಂದೇ ಭಾವಿಸಿದ್ದಾರೆ. ಉತ್ತರ ಭಾರತದಲ್ಲಿ ಕುಟುಂಬದಲ್ಲಿರುವ ಸಾಮಾನ್ಯ ದೃಶ್ಯವೆಂದರೆ ಗಂಡು ಮಗುವಿನ ಜನನವಾದರೆ ಹಬ್ಬದ ರೀತಿ ಸಂತೋಷ ಪಟ್ಟು ಎಲ್ಲರಿಗೂ ಸಿಹಿ ತಿಂಡಿ ಹಂಚಿ ಹಣ ಕೊಡುವುದು, ಅದೇ ಹೆಣ್ಣು ಮಗುವಾದರೆ ನಿಶಬ್ದವಾಗಿದ್ದು ಮಂಕು, ಸಂತಾಪದ ರೀತಿಯಲ್ಲಿ ಮಾಡುತ್ತಾರೆ.

ಉತ್ತರ ಭಾರತದಲ್ಲಿ ಕೂಡ ವರದಕ್ಷಿಣೆ ಸಮಸ್ಯೆ, ವರದಕ್ಷಿಣೆ ಕಿರುಕುಳ ಸಾವು ಸಾಮಾನ್ಯವಾಗಿದೆ. ಬಿಹಾರದಲ್ಲಿ ಹುಡುಗಿಯು ಮದುವೆಯಾದರೆ ಪೋಷಕರ ಕಡುಬಡತನವನ್ನು ಕಡಿಮೆಮಾಡುತ್ತದೆ, ಆಶ್ಚರ್ಯದ ಸಂಗತಿಯಾದರೂ ಪಾಟ್ನಾದ NGO ಅಥಿತಿ ಸಮೀಕ್ಷೆ ಪ್ರಕಾರ ಇಲ್ಲೂ ಕೂಡ ವರ್ಷಕ್ಕೆ 1,63,000 ಹೆಣ್ಣುಮಕ್ಕಳನ್ನು ಸಾಯಿಸುವುದನ್ನು ಕಾಣಬಹುದಾಗಿದೆ. ಹರಿಯಾಣದಲ್ಲಿ ಮೊಬೈಲ್ ಕ್ಲಿನಿಕಗಳು ಲಿಂಗ ನಿರ್ಣಯ ಪರೀಕ್ಷೆಯನ್ನು ಮನೆಗೆ ಹೋಗಿ ಮಾಡುತ್ತಾರೆ. ಡಾಕ್ಟರ್‌ರು ಜನರೇಟರ್ ಮತ್ತು Ultra Sound Scanner ಗಳನ್ನು ತೆಗೆದುಕೊಂಡು ಹೋಗಿ ಮನೆ ಮನೆಗಳಲ್ಲಿ ಲಿಂಗ ನಿರ್ಣಯ ಪರೀಕ್ಷೆ ಮಾಡುತ್ತಾರೆ.

Pre-Natal Diagnostic Techniques ಬಂದಿದ್ದರೂ ಅದು ಯಾವುದೇ ಉಪಯೋಗಕ್ಕೆ ಬರುತ್ತಿಲ್ಲ. ಅಲ್ಟ್ರಾಸೌಂಡ್ ಮಿಷನ್‌ನ ಕಪ್ಪು ಮತ್ತು ಬಿಳಿಯ ಯಂತ್ರದ ಬೆಲೆಯು 3 ಲಕ್ಷ, ಬಣ್ಣದ ಸ್ಕ್ಯಾನರ್ ಬೆಲೆ 16 ಲಕ್ಷ ದಿಂದ 75 ಲಕ್ಷ, ಲಿಂಗ ನಿರ್ಣಯದ ಪರೀಕ್ಷೆಯು Sonography ಪ್ರಕಾರ 2,000 ದಿಂದ 4,000ವರೆಗೆ, ಭ್ರೂಣ ಹತ್ಯೆಗೆ ನರ್ಸಿಂಗ್ ಹೋಂನಲ್ಲಿ ತಗಲುವ ವೆಚ್ಚ 3,500. ಭ್ರೂಣ ಹತ್ಯೆ ಮಾಡುವುದಕ್ಕೆ ಕೆಲವು ಕ್ಲಿನಿಕ್‌ಗಳಲ್ಲಿ ಅತಿಯಾದ ವೆಚ್ಚವಿದ್ದು ಅದೊಂದು ವ್ಯಾಪಾರ ರೀತಿಯಲ್ಲಿದೆ. Medical Equipment Division ಅಧ್ಯಕ್ಷರಾದ ಅಂಜನಾ ಮೋಸೆ ಮೇ 2003 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯವರೆಗೆ ಪತ್ರಬರೆದು ಅದರಲ್ಲಿ ಹೇಳುವುದೇನೆಂದರೆ ಅಲ್ಟ್ರಾಸೌಂಡ್ ಮಿಷನ್‌ಗಳನ್ನು ವ್ಯಾಪಾರ ದೃಷ್ಟಿಯಿಂದ ಮಾರದೆ ಅದನ್ನು ರಿಜಿಸ್ಟರ್ ಮಾಡಿಸುವವರಿಗೆ ಮಾತ್ರ ಮಾರಾಟ ಮಾಡಬೇಕು. ಇದರಿಂದ ಈ ಉಪಕರಣದ ದುರುಪಯೋಗವನ್ನು ತಪ್ಪಿಸಬಹುದಾಗಿದೆ. ಹೆಣ್ಣು ಶಿಶುವಿನ ಭ್ರೂಣಹತ್ಯೆಯು ಹೆಚ್ಚಾಗುತ್ತಿರುವ ಕಾರಣದಿಂದ ಸರ್ಕಾರವೂ ಇದರ ಕಡೆ ಗಮನ ಹರಿಸಿ ಕೇವಲ ರಿಜಿಸ್ಟರ್ ಆಗಿರುವವರಿಗೆ ಮಾತ್ರ, ಮಿಷನ್‌ಗಳನ್ನು ಉಪಯೋಗಿಸಬೇಕು ಎಂಬ ಕಠಿಣವಾದ ನಿಯಮವನ್ನು ಹಾಕಬೇಕು ಎಂದು ರೋಹಿತ್ ಮೆಹ್ತಾ ಹೇಳುತ್ತಾರೆ. ಮಿಷನ್ ತಯಾರಿಕೆಯ ಸಂಸ್ಥೆಯವರಾದ larsen and toubro ರು ಈ ಕಾಯ್ದೆ ಬಂದ ಮೇಲೆ ನಾವು ರಿಜಿಸ್ಟರ್ ಆಗದವರಿಗೆ ಮಾರಾಟಮಾಡುವುದನ್ನು ನಿಲ್ಲಿಸಿದ್ದೇವೆ ಎಂದು ಹೇಳುತ್ತಾರೆ.

ನೈನಾ ಸುಖಿಜಾ, 39 ವರ್ಷ

ಈಕೆ 10 ವರ್ಷದ ನಂತರ ಎರಡನೇ ಹೆಣ್ಣುಮಗುವಿಗೆ ಜನನ ನೀಡಿದಳು. ಗಂಡ ಮತ್ತು ಅತ್ತೆ ಯಿಂದ ಮತ್ತೆ ಗಂಡುಮಗುವಿನ ಜನನ ಆಗಬೇಕೆಂಬ ಹಠ. ಇವಳ ಕುಟುಂಬದ ಹಿರಿಯರು ಇವಳ ಗಂಡನಿಗೆ ಆಸ್ತಿಯಲ್ಲಿ ಪಾಲು ಕೊಡಬೇಕಾದರೆ ಗಂಡು ಮಗು ಆಗಲೇ ಬೇಕೆಂಬ ಷರತ್ತು ಹಾಕಿದ್ದರಿಂದ ಸುಖಿಜಾ ಮೂರನೇ ಮಗುವೂ ಹೆಣ್ಣು ಮಗುವೆಂದು ಅಲ್ಟ್ರಾಸೌಂಡ್‌ಟೆಸ್ಟ್‌ನಿಂದ ಬಹಿರಂಗವಾದ ಮೇಲೆ ಗರ್ಭಪಾತ ಮಾಡಿಸಿಕೊಳ್ಳಬೇಕಾಯಿತು. ಡಾಕ್ಟರ್ ಮತ್ತೆ ಗರ್ಭಪಾತ ಮಾಡಿಸದಂತೆ ಎಚ್ಚರಿಕೆ ನೀಡಿದರು. ಸುಖಿಜಾಗೆ ಗಂಡು ಮಗುವಾಗುವರೆಗೆ ಇದರಿಂದ ತಪ್ಪಿಸಿಕೊಳ್ಳಲು ಬೇರೆ ದಾರಿಯೇ ಇಲ್ಲದಂತಾಗಿದೆ.

ಹರಿಯಾಣದ ಅಂಬಾಲದ ಮದನ್ ಅಲ್ಟ್ರಾಸೌಂಡ್ ಮತ್ತು ಟೆಸ್ಟ್‌ಟ್ಯೂಬ್ ಸೆಂಟರ್‌ಗೆ 4 ತಿಂಗಳ ಗರ್ಭಿಣಿಯಾದ ಅಮರಜಿತ್ ಕೌಹರ್ ದಾಖಲಾದರು. ಗರ್ಭಪಾತ ಮಾಡುವಾಗ ಇವರು ಸತ್ತು ಹೋದರು. ಇದಕ್ಕೆ ತಗುಲಿದ ಖರ್ಚು 12,000. ಇವರಿಗೆ ಗರ್ಭಪಾತ ಮಾಡಿದ ಅಜಯಾ ಮತ್ತು ನರ್ಮದಾ ಮದನ್‌ರನ್ನು ಪೋಲಿಸರು ಬಂಧಿಸಿದರು. ದಾಹಿಯಂ ಈ ಕೇಸ್‌ನ್ನು ತೆಗೆದುಕೊಂಡು ಅಜಯಾ ಮತ್ತು ನರ್ಮದಾ ಕ್ಲಿನಿಕ್ ದೌರ್ಜನ್ಯವನ್ನು ಖಂಡಿಸಿದರು. ಹೆಣ್ಣು ಶಿಶು ಎಂದು ಗರ್ಭಪಾತ ಮಾಡಲಾಯಿತು. ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಫರಿದಾಬಾದ್‌ನಲ್ಲಿ 3 ಕೇಸ್‌ಗಳನ್ನು ತೆಗೆದುಕೊಂಡು ಅವುಗಳನ್ನು ತೀರ್ಮಾನ ಮಾಡಿಸಿದರು. ಹರಿಯಾಣ ರಿಜಿಸ್ಟರ್‌ರನ ಕ್ಲಿನಿಕ್‌ನಲ್ಲಿದ್ದ 760 ಅಲ್ಟ್ರಾಸೌಂಡ್ ಮಿಷನ್‌ಗಳನ್ನು ಜಪ್ತಿ ಮಾಡಿಸಿದರು. 17 ಕ್ರಿಮಿನಲ್ ದೂರುಗಳನ್ನು ನೀಡಿದರು.ಇದರಿಂದ 34 ಅಲ್ಟ್ರಾಸೌಂಡ್ ಮಿಷನ್‌ಗಳು ಜಪ್ತಿಯಾದವು. ಮುಂದೆ ಇದರಿಂದ 90% ರಷ್ಟು ಹೆಣ್ಣು ಶಿಶುವಿನ ಭ್ರೂಣ ಹತ್ಯೆ ಕಡಿಮೆಯಾಯಿತು.

ಭಾರತದಲ್ಲಿ ಗಂಡು ಮಕ್ಕಳು ಬೇಕು ಎಂಬ ಕಾರಣಕ್ಕೆ ಶಿಶು ಭ್ರೂಣ ಹತ್ಯೆಯನ್ನು ಮಾಡುತ್ತಿದ್ದಾರೆ. ಸಮಾಜದಲ್ಲಿ ಗಂಡು ಹೆಣ್ಣು ಸಂಖ್ಯೆಯಲ್ಲಿ ಸಮಾನತೆಯನ್ನು ಪಡೆಯುವುದು ಕಷ್ಟವಾಗುತ್ತದೆ. ಪುರುಷರ ಸಂಖ್ಯೆ ಹೆಚ್ಚಾಗಿ ಸ್ತ್ರೀಯ ಸಂಖ್ಯೆ ಕಡಿಮೆಯಾಗುವುದರಿಂದ ಸಮಾಜದಲ್ಲಿ ಅನೇಕ ಅನಾಹುತಗಳು ಸಂಭವಿಸುತ್ತದೆ.

ಸಾಧ್ಯವಾಗುವಂತೆ ಮಾಡಲು ಸ್ತ್ರೀ ಶಕ್ತಿಯು ಮುಂದೆ ಬರಬೇಕು. ಕುಟುಂಬದಲ್ಲಿ ಆವಳು ಅಧಿಕಾರವನ್ನು ಪಡೆಯುವುದರಿಂದ ಗಂಡಿಗಿಂತ ಅಧಿಕಾರ, ಹಣದ ಬಲದಿಂದ ಮುಂದೆ ಬಂದು ಹೆಣ್ಣುಮಕ್ಕಳ ಬಾಲ್ಯ, ವಿದ್ಯಾಭ್ಯಾಸ, ಮದುವೆ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಲು ಬಹುದು. ಆಗ ಗಂಡಿನ ಸಹಾಯವಿಲ್ಲದೆ

ಪ್ರತೀಕ್ಷಾ ಮೆಹ್ತಾ 31 ವರ್ಷ

ಹೆಣ್ಣು ಮಗುವಿನ ಜನನ ಆದ ಮೇಲೆ ನನ್ನ ಅತ್ತೆಯಾವಾಗಲೂ ನನ್ನ ಗಂಡನ ಕಸಿನ್ನಿಗೆ ಗಂಡು ಮಕ್ಕಳಿವೆ. ಆದರೆ ನಿನಗೆ ಹೆಣ್ಣು ಮಗು ಎಂದು ಬೈಯುತ್ತಿರುತ್ತಾಳೆ. ಇವಳ ಅತ್ತೆಯ ಪ್ರಕಾರ ಗಂಡು ಮಗು ಮಾತ್ರ ಮಂಶದ ಹೆಸರನ್ನು ಬೆಳೆಸುವುದು ಆದ್ದರಿಂದ ಗಂಡು ಮಗುವನ್ನು ಹೆರಲೇ ಬೇಕು ಎಂಬ ಹಠ. ಮತ್ತೆ ಹೆಣ್ಣು ಮಗುವಾದರೆ ಗರ್ಭಪಾತಕ್ಕೆ ತಯಾರಾಗಿರು ಎಂದು ಹೇಳುತ್ತಿದ್ದಳು. ಈಗ ಪ್ರತೀಕ್ಷಾಗೆ ಏನು ಮಾಡಬೇಕು ಎಂಬುದು ತಿಳಿದಿಲ್ಲ.

ಅನನ್ಯ 18 ತಿಂಗಳು :

ದೆಹಲಿಯ ಪಾಟ್ನಾದ ಬಳಿ ಇರುವ ದಾಸ್‌ಪುರದ ಜಾಗದಲ್ಲಿ ಮಾರ್ಚ್ 2002 ರಂದು ಒಂದು ನವಜಾತ ಹೆಣ್ಣು ಶಿಶುವೊಂದು ಅನಾಥವಾಗಿ ಬಿದ್ದಿತ್ತು. ಇದೇ ರೀತಿ ಇನ್ನೂ ಬೇರೆ ಹೆಣ್ಣು ಮಕ್ಕಳು ಅದೇ ಪ್ರದೇಶದಲ್ಲಿ ಅನಾಥವಾಗಿದ್ದುದ್ದನು ಕಾಣಬಹುದು. ಅನನ್ಯಳನ್ನು NGO ಶಕ್ತಿವಾಹಿನಿ ತೆಗೆದುಕೊಂಡು ಅನಂತರ ಬೇರೆಯವರಗೆ ಇವಳನ್ನು ದತ್ತು ಪಡೆದುಕೊಂಡರು. ಅಪೂರ್ವಳು ಕೂಡ ಇದೇ ರೀತಿ. ಇವಳಿಗೆ ಈಗ ಎರಡು ವರ್ಷ. ದಾಸ್‌ಪುರ ಪ್ರದೇಶದಲ್ಲಿ ಅನಾಥವಾಗಿದ್ದಳು. ಇವಳ ದೇಹವೆಲ್ಲಾ ಗಾಯಗಳಾಗಿತ್ತು. ಈಗ ಇವಳನ್ನು ಬೇರೆಯವರು ಸ್ವೀಕರಿಸಿದ್ದಾರೆ.

ಜನಸಂಖ್ಯೆಯ ಪ್ರಮಾಣ ಅಧಿಕವಾಗಿ ಇರುವುದರಿಂದ ವಸತಿ, ಆಹಾರ ಕೊರತೆ ಮುಂತಾದ ಸಮಸ್ಯೆಗಳು ಸಮಾಜದಲ್ಲಿ ಉಂಟಾಗುತ್ತದೆ. ಅದಕ್ಕೆ ಸಮಾಜಕ್ಕೆ ಒಳಿತನ್ನು ಉಂಟು ಮಾಡಲು ಜನಸಂಖ್ಯೆಯನ್ನು ನಿಯಂತ್ರಿಸುವುದು ಅವಶ್ಯಕವಾಗಿದೆ. ಆದರೆ ಅದು ಹೆಣ್ಣು ಮಕ್ಕಳನ್ನು ಹತ್ಯೆ ಮಾಡುವುದರಿಂದ ಅಲ್ಲ.

ಸಮಾಜದಲ್ಲಿ ಹಲವು ಬದಲಾವಣೆಯನ್ನು ಮಾಡಿ ಹೆಣ್ಣು ಅವಳ ಒಳಿತನ್ನು ಸಾಧಿಸುವುದಕ್ಕೆ ಕೆಲವು ಯೋಜನೆಗಳನ್ನು ಮಾಡಬೇಕು. ಇದನ್ನು ಸಾಧಿಸುವುದಕ್ಕೆ ಸ್ತ್ರೀಯರಿಗೆ ಭ್ರೂಣ ಹತ್ಯೆ ಮಾಡುವುದನ್ನು ಮೊದಲು ನಿಲ್ಲಿಸಬೇಕು. ಇದು

ಅವಳ ಜೀವನವನ್ನು ಅವಳೇ ರೂಪಿಸಿಕೊಳ್ಳಬಹುದಾಗಿದೆ. ಆಗಮಾತ್ರ ಪೋಷಕರಿಗೆ, ಸಮಾಜಕ್ಕೆ ಹೆಣ್ಣು ಹೊರೆಯಾಗುವುದಿಲ್ಲ.

ಆಧಾರ : ಇಂಡಿಯ ಟು ಡೇ
ನವೆಂಬರ್ 10, 2003
ಮೂಲ : ರಮೇಶ್ ವಿನಾಯಕ್,
ಶೀಲಾ ರಾವಲ್, ಸಂಜಯ್ ಕುಮಾರ್ ಮತ್ತು
ಅರುಣ್ ರಾವ್,
ಕನ್ನಡಕ್ಕೆ ಸಂಗ್ರಹಿಸಿದವರು ಆರ್.ವಿ ಸವಿತ

'ಸ್ತ್ರೀವಾದದ ಭವಿಷ್ಯ' - ಒಂದು ಲೇಖನ

ರಾಜಕೀಯವಾಗಿ ನಾವು ಎಷ್ಟು ಮುಂದೆ ಬಂದಿದ್ದೇವೆ ಎಂಬುದನ್ನು ಕುರಿತು ನಾವಿಂದು ಯೋಚಿಸಬೇಕಾಗಿದೆ. ನಾವು ಮೌನವನ್ನು ಮುರಿಯುವಷ್ಟರ ಮಟ್ಟಿಗೆ ಸಾಧನೆ ಮಾಡಿರಬಹುದು. ಅನುಭವಗಳು, ಘಟನೆಗಳು, ವಾಸ್ತವಗಳು, ಇಲ್ಲಿಯವರೆಗೆ ಮಾತನಾಡಿರದಿದ್ದ ಸತ್ಯಗಳು ಹೀಗೆ ಪ್ರತಿಯೊಂದನ್ನು ಮಾತನಾಡಲಿಕ್ಕೆ ನಾವು ಪ್ರಾರಂಭಿಸಿದ್ದೇವೆ. ವಿಶೇಷವಾಗಿ ಸಮಾಜ ಹೆಸರಿಸಿರದ, ರಾಜಕಾರಣಿಗಳು ಗುರುತಿಸಿರದ, ನೊಂದವರ ದೃಷ್ಟಿಯಿಂದ ಕಾನೂನು ನೋಡಿರದ ಮಹಿಳೆಯರ ಅನುಭವಗಳನ್ನು, ಅವರ ಮುಚ್ಚಿಡಲಾದ ಅನುಭವಗಳನ್ನು ನಾವಿಂದು ಮಾತನಾಡುತ್ತಿದ್ದೇವೆ. 'ಮೌನವನ್ನು ಮುರಿಯುವುದು' ಎಂದು ನಾವು ಹೇಳಿದಾಗ ಕೆಲವರು 'ಮೌನ' ವನ್ನು ಹಗುರವಾದ ಸ್ತರದಲ್ಲಿ ಅರ್ಥೈಸುತ್ತಾರೆ. ಅಂದರೆ ಮಾತು-ಹರಟೆ. ಈ ಮಾತನ್ನು ಹಗುರವಾದ ಸ್ತರದ ಮೌನ ಮುಚ್ಚಿಹಾಕಿದೆ. ಇದು ನಮ್ಮ ವಿಧೇಯತೆ ಹಾಗೂ ವ್ಯಾನರಿಸಂ ಗಳಿಗೆ ಸಂಬಂಧಿಸಿದೆ ಎಂದು ಹೇಳಲಾಗುತ್ತದೆ. ಮಹಿಳೆಯರಿಗೆ ಕಾಣಿಸಿಕೊಳ್ಳುವುದಕ್ಕೆ ಕಲಿಸಲಾಗಿದೆಯೇ ವಿನಃ ಕೇಳಿಸಿಕೊಳ್ಳುವು-ದಕ್ಕಲ್ಲ, ಕೇಳಿಸಿಕೊಳ್ಳುವಂತೆ ಹೇಳುವುದಕ್ಕಾಗಿಯೂ ಅಲ್ಲ. ಆದರೆ ನಾನು ಮಾತನಾಡುತ್ತಿರುವುದು ಅತ್ಯಂತ ಆಳವಾದ ಮೌನದ ಬಗ್ಗೆ. ಹಿಂಸೆಗೊಂಡ ಹೃದಯದೊಳಗಿನ ಮೌನದ ಬಗ್ಗೆ. ಯಾರು ಏನು ಹೇಳಬೇಕು ? ವಿಶೇಷವಾಗಿ ಹೆಂಗಸರು ಏನನ್ನು ಮಾತ್ರ ಹೇಳಬೇಕು ? ಎಂಬುದನ್ನು ನಿರ್ಧರಿಸುವ ಭಯಾನಕತೆ ಇದೆ. ಈ ಭಯಾನಕತೆಯ ಹಿಂಸೆಯಲ್ಲಿ ಕೆಲವರು ತಮಗೆ ಜೀವನ ಹೇಗಿದೆ ಎಂಬಂತಹ ಪ್ರಮುಖವಾದ ವಿಚಾರಗಳನ್ನು ಹೇಳದಂತೆ ಮಾಡಲಾಗಿದೆ. ಈ ರೀತಿಯ ಭಯಾನಕತೆಯ ಬಗ್ಗೆ ನಾನು ಮಾತನಾಡುತ್ತಿರುವುದು.

ನಾವು ಬದುಕುತ್ತಿರುವ ರಾಜಕೀಯ ವ್ಯವಸ್ಥೆ ಈ ರೀತಿಯಲ್ಲಿನ ಆಳವಾದ ಮೌನದ ಅಡಿಪಾಯ ಹೊಂದಿದೆ. ನಾವು ಹೇಳದಿರುವಂತಹ ಸಂಗತಿಗಳ ಮೇಲೆ ಈ ಸಮಾಜ ನಿಂತಿದೆ. ಇನ್ನೂ ನಿರ್ಧಿಷ್ಟವಾಗಿ ಎಂದರೆ ಎಲ್ಲಾ ಪಂಗಡಗಳ, ಎಲ್ಲಾ ವರ್ಗದ, ಅತ್ಯಂತ ಉನ್ನತ ಸ್ತರದ ಹೆಂಗಸರು ಸೇರಿದಂತೆ ಇವರೆಲ್ಲ ಏನು ಹೇಳಿಲ್ಲವೋ ಅದರ ಆಧಾರದ ಮೇಲೆಯೇ ಈ ಸಮಾಜದ ಅಡಿಪಾಯ ಇದೆ. ನಮ್ಮ ರಾಜಕೀಯ ವ್ಯವಸ್ಥೆಗಳು ಭಾವಿಸುವ ಸಂಗತಿಗಳೂ ಸಹ ಮಹಿಳೆಯರು ಮಾತನಾಡಿರದಿದ್ದ ವಿಚಾರಗಳಿಂದಲೇ ರೂಪಿತವಾಗಿದೆ. ಸ್ವಾತಂತ್ರ್ಯದ ಕಲ್ಪನೆಗಳನ್ನು ನಮ್ಮ ಭಾಗವಹಿಸುವಿಕೆ ಇಲ್ಲದೇ ಆಳವಾದ ಮೌನದ ಹಿನ್ನಲೆಯಲ್ಲಿ ರೂಪಿಸಲಾಗಿದೆ. ಸಾಮಾಜಿಕ ಹಾಗೂ ನಾಗರಿಕ ಸೌಲಭ್ಯಗಳನ್ನು ನಾವು ಸುಮ್ಮನೇ ಒಪ್ಪಿಕೊಳ್ಳಬೇಕಾಗಿದೆ. ಯಾವುದು ಸಾಮಾನ್ಯ ಬದುಕು ಎಂದು ಹೇಳುತ್ತೇವೆಯೋ ಅದೂ ಕೂಡಾ ಆಳವಾದ ಮೌನದ ಮೇಲೆಯೇ ಅವಲಂಬಿಸಿದೆ. ಲಿಂಗ ಕುರಿತ ಕಲ್ಪನೆಯೂ ಅಷ್ಟೇ. ಗಂಡಸರು-ಹೆಂಗಸರು ಈ ವಿಭಾಗಗಳೂ ಸಹ-ಒತ್ತಾಯಿಸಲ್ಪಟ್ಟ ಹೆಂಗಸಿನ ಮೌನದ ಮೇಲೆಯೇ ನಿಂತಿದೆ. ಸಮುದಾಯದ ಬಗ್ಗೆಗಿನ ಕಲ್ಪನೆಗಳು, ಸಮುದಾಯ ಏನು ಎನ್ನುವುದೂ ಕೂಡಾ ಈ ಮೌನದ ಹಿನ್ನಲೆಯನ್ನೇ ಹೊಂದಿದೆ. ಸಮಾಜಗಳು - ಹೆಂಗಸಿನ ಈ ಆಳವಾದ ಮೌನವನ್ನು ಮುಂದುವರಿಸಿಕೊಂಡು ಹೋಗುವ ರೀತಿಯಲ್ಲಿಯೇ ರಚಿತವಾಗಿವೆ. ಹಾಗಾಗಿ ಸಮಾಜಗಳು ರಚಿತವಾದ ರೀತಿ, ರಚನೆಗಳನ್ನು ಬದಲಾಯಿಸದಿದ್ದರೆ ನಮ್ಮ ಆಳವಾದ ಮೌನವನ್ನು ಮುರಿಯುವುದೂ ಕಷ್ಟ ಎಂಬುದನ್ನು ನಾವು ಅರ್ಥೈಸಿಕೊಳ್ಳಬೇಕಾಗಿದೆ.

ನಾವು ಆಳವಾದ ಮೌನ ಮುರಿದು ಮಾತನಾಡಲು ಪ್ರಾರಂಭಿಸಿದ್ದೇವೆ. ನಮ್ಮ ಮೇಲಿನ 'ಒತ್ತಡ'ವನ್ನು ಗುರುತಿಸಿದ್ದೇವೆ. ಉದಾ: ಮದುವೆ-ಪುರುಷನಿಗೆ ನೀಡುವ ಕಾನೂನುಬದ್ಧ ಅಧಿಕಾರ. ಅವರು ವಿವಾಹದ ಒಳಗಡೆ ತಮ್ಮ ಹೆಂಡತಿಯರನ್ನು 'ಸಂಭೋಗಕ್ಕೆ' ಒತ್ತಾಯಿಸುವ ಹಕ್ಕು. ಇದನ್ನು ಅತ್ಯಾಚಾರ ಎಂದು ನಾವು ಕರೆದಿದ್ದೇವೆ. ಇದನ್ನು 'ಆಸೆ' ಅಥವಾ 'ಪ್ರೀತಿ' ಎಂದು ಕರೆಯಲಾಗಿತ್ತು. ಲೈಂಗಿಕ ಕ್ರಿಯೆಯಲ್ಲಿ ಹೆಂಗಸರು 'ಟಾರ್ಗೆಟ್ಸ್' ಹಾಗೂ ಪುರುಷರು 'ಹೀರೋ' ಎಂಬಂತಹ ಹಳೆಯ ವಿಚಾರಧಾರೆಗಳಿಗೆ ನಾವು ಸವಾಲು ಎಸೆದಿದ್ದೇವೆ. ಈ ಮಾದರಿ ಬಲಿಪಶುವನ್ನಾಗಿಸುವ ಮಾದರಿ. ಯಾರು ಹೀಗೆ ಹಿಂಸಾತ್ಮಕವಾಗಿ ವರ್ತಿಸುತ್ತಾರೋ ಅವರು ಈ ಹಳೆಯ ಮಾದರಿಗೆ ಅಂಟಿಕೊಂಡಿರುತ್ತಾರೆಯೇ ಹೊರತು ಪ್ರಿಯಕರರಾಗಿರುವುದಿಲ್ಲ. ಇದನ್ನು ನಾವು ಹೇಳಿದ್ದೇವೆ. ನಾವು 'ಅತ್ಯಾಚಾರ'ವನ್ನು ಗುರುತಿಸಿದ್ದೇವೆ. ಲೈಂಗಿಕ ಕಿರುಕುಳವನ್ನು ಗುರುತಿಸಿದ್ದೇವೆ. ಸೂಳೆಗಾರಿಕೆ ಗುರುತಿಸಿದ್ದೇವೆ. ಹೊಡೆಯುವುದನ್ನು ಗುರುತಿಸಿದ್ದೇವೆ. ಅಶ್ಲೀಲತೆಯನ್ನು ಹೆಂಗಸರ ಮೇಲಿನ ದಬ್ಬಾಳಿಕೆ, ಅವರ ವಿರುದ್ಧದ ಅಪರಾಧ ಎಂದು ಗುರುತಿಸಿದ್ದೇವೆ. ಲೈಂಗಿಕ ದಬ್ಬಾಳಿಕೆಯನ್ನು 'ಲೈಂಗಿಕ ಅಬ್ಯೂಸ್' ಎಂದು ಗುರುತಿಸಿದ್ದೇವೆ. ಹೆಂಗಸರು ಸರಕುಗಳಾಗಿರುವುದನ್ನು, ಅವರನ್ನು ಮಾರಾಟ ಮಾಡುವುದನ್ನು ನಾವು ಅಮಾನವೀಯತೆ ಎಂದು ಕರೆದಿದ್ದೇವೆ. ಆಕೆಯನ್ನು ಸರಕನ್ನಾಗಿಸುವುದು ಹಾಗೂ ಲೈಂಗಿಕ ದಬ್ಬಾಳಿಕೆ ಆಕೆಯಲ್ಲಿ ಕೀಳರಿಮೆ ಹುಟ್ಟಿಸುತ್ತದೆ ಎಂಬುದನ್ನು ಕೂಡಾ ನಾವು ಹೇಳಿದ್ದೇವೆ. ಆತ್ಮೀಯ

ಸಂಬಂಧಗಳಲ್ಲಿ ಇರುವ ಹಿಂಸೆಯ ಮುಖಗಳನ್ನು ನಾವು ಗುರತಿಸಿದ್ದೇವೆ. ಅತ್ಯಾಚಾರ ಹಿಂಸಾತ್ಮಕವಾಗಿರುವ ಬರಿಯ ಅಪರಿಚಿತ ನಿಂದಲ್ಲ, ಹಿಂಸಾತ್ಮಕವಾಗಿರುವ ಪ್ರಿಯಕರನಿಂದ, ಗೆಳೆಯನಿಂದ, ಪಕ್ಕದ ಮನೆಯವನಿಂದ, ನಮಗೆ ಹತ್ತಿರವಾದ ಗಂಡಸರಿಂದ ಕೂಡಾ ನಡೆಯಬಹುದು ಎಂಬುದನ್ನು ನಾವು ಗುರುತಿಸಿದ್ದೇವೆ.

ನಾವು ಅಪರಿಚಿತರ ಬಗ್ಗೆ ಹೆಚ್ಚು ಕಲಿತಿದ್ದೇವೆ. ನಮಗೆ ಪರಿಚಯವಿರದ ಗಂಡಸರು ನಮ್ಮನ್ನು ಹೇಗೆ ಗುರಿಯಾಗಿಸಿ ಬೇಟೆಯಾಡುತ್ತಾರೆ ಎಂಬುದನ್ನು ಕಲಿತಿದ್ದೇವೆ. ಲೈಂಗಿಕ ದೌರ್ಜನ್ಯಕ್ಕೆ ಒಳಗಾದವಳೇ ಅದಕ್ಕೆ ಕಾರಣ ಎನ್ನುವ ಸಮಾಜದ ಅಭಿಪ್ರಾಯ ಒಪ್ಪಿಕೊಳ್ಳಲು ನಾವು ನಿರಾಕರಿಸಿದ್ದೇವೆ. ಆಕೆಯೇ ಪ್ರೋತ್ಸಾಹಿಸಿದಳು, ಆಕೆಗೇ ಬೇಕಿತ್ತು, ಆಕೆಗೇ ಇಚ್ಚೆ ಇತ್ತು ಎಂಬುದನ್ನು ಒಪ್ಪಿಕೊಳ್ಳಲು ನಾವು ನಿರಾಕರಿಸಿದ್ದೇವೆ. ಅಶ್ಲೀಲತೆ ತಿರಸ್ಕರಿಸುವಲ್ಲಿ ನಾವು ಪುರುಷರ ಪ್ರಭುತ್ವ ನಿರಾಕರಿಸಿದ್ದೇವೆ. ಈ ಪ್ರಭುತ್ವ ಹೆಂಗಸರನ್ನು ಪ್ರಾಣಿಗಳೆಂದು ವ್ಯಾಖ್ಯಾನಿಸುತ್ತದೆ, ಮನುಷ್ಯರಿಗಿಂತ ಕೆಳಗಿನವಳೆಂದು ವ್ಯಾಖ್ಯಾನಿಸುತ್ತದೆ. ಆಕೆಗೆ ನೋವಾಗುವುದು, ಗಾಯವಾಗುವುದು, ಅತ್ಯಾಚಾರ ವಾಗುವುದು ಇಷ್ಟ ಎಂದು ಇದು ವ್ಯಾಖ್ಯಾನಿಸುತ್ತದೆ.

ನಾವು ಕಾನೂನುಗಳನ್ನು ಬದಲಾಯಿಸಿದ್ದೇವೆ, ಈಗ ಅತ್ಯಾಚಾರದ ಆರೋಪದಲ್ಲಿ ಸಾಕ್ಷಿ ಬೇಕಿಲ್ಲ. ಮೊದಲು ಬೇಕಿತ್ತು. ಆಕೆಗೆ ಗಾಯವಾಗಿರದಿದ್ದರೆ, ನೀಲಿಯಾಗುವಷ್ಟು ಹೊಡೆತ ತಿಂದಿರದಿದ್ದರೆ, ಪೈಪ್‌ರಾಡ್‌ನಿಂದ ಹೊಡೆಯಲ್ಪಟ್ಟಿದ್ದರೆ ಆಕೆಗೆ ಅತ್ಯಾಚಾರವಾಗಿದೆ ಎಂದು, ಇಲ್ಲದಿದ್ದರೆ ಆಕೆ ಒಪ್ಪಿಗೆ ನೀಡಿದ್ದಳೆಂದೇ ತೀರ್ಮಾನಿಸಲಾಗುತ್ತಿತ್ತು. ಈಗ ಸಾಕ್ಷಿಗಳನ್ನು ಸಂಗ್ರಹಿಸುವ ರೀತಿಯನ್ನು ನಾವು ಹೆಚ್ಚು ಗಂಭೀರವಾಗಿಸಿದ್ದೇವೆ. ಇದು ಸಂಶೋಧನಾ ಅಧಿಕಾರಿಯ ಇಚ್ಛೆ/ಅನಿಚ್ಛೆಯ ಮೇಲೆ ಅವಲಂಬಿತವಾಗಿರುವುದಿಲ್ಲ. ಹೊಡೆತ ಒದೆ ತಿನ್ನುವ ಹೆಂಗಸರಿಗಾಗಿ ಇದನ್ನು ನಾವು ಮಾಡಿಲ್ಲ. ನಾವು ಆಶ್ರಯ ನೀಡಿದ್ದೇವೆ, ಸ್ಥಳ ತೋರಿಸಿದ್ದೇವೆ, ತಪ್ಪಿಸಿಕೊಳ್ಳಲು ಸಹಾಯ ಮಾಡಿದ್ದೇವೆ ಅಷ್ಟೇ, ಆದರೆ ನಾವು ಮಾಡಿದ ಯಾವುದೂ ಕೂಡಾ ಅತ್ಯಾಚಾರಕ್ಕೊಳಗಾದ, ಹೊಡೆತ ತಿಂದ, ಸೂಳೆಗಾರಿಕೆಗೆ ಇಳಿದ ಹೆಂಗಸರಿಗೆ ಸಹಾಯವಾಗಿಲ್ಲ. ಅಪರಾಧಿಗೆ ಸಂಬಂಧಿಸಿದಂತೆ ನಾವು ಸಾಮಾಜಿಕ ಹಾಗೂ ಕಾನೂನು ಬದಲಾವಣೆ ಮಾಡಿದ್ದೇವೆ. ಆದರೆ ಅತ್ಯಾಚಾರಕ್ಕೊಳಗಾದ ಅಥವಾ ಹೊಡೆತ ತಿಂದ ಮಹಿಳೆಯರಿಗೆ ನಾವು ಸಾಕಷ್ಟು ಸಹಾಯ ನೀಡಿಲ್ಲ. ಈ ಸಮಾಜದ ಅರ್ಧದಷ್ಟಿರುವ ಜನಾಂಗದ ಮೇಲೆ ಅತ್ಯಾಚಾರ ನಡೆದಿದ್ದರೆ, ಅಥವಾ ಅವರು ಹೊಡೆತ ತಿಂದಿದ್ದರೆ, ಅಮೇರಿಕಾ ಹಾಗೂ ಕೆನಡಾದ ತರಹ ನಾವು ಸರ್ಕಾರಿ ಕಟ್ಟಡಗಳನ್ನು ನಮ್ಮ ಆಶ್ರಯದಾಣಗಳಾಗಿ ಬಳಸಿಕೊಳ್ಳಬೇಕಾಗುತ್ತದೆ. ನಮ್ಮ ಚರ್ಚುಗಳನ್ನು ಹೆಂಗಸರಿಗಾಗಿ ಬಳಸಿ. ಇದು ನಿಮಗೆ ಸೇರಿದ್ದು ಇದರಲ್ಲಿ ನೀವು ಬದುಕಿ. ನಿಮಗೆ ಏನು ಬೇಕೋ ಅದು ಮಾಡಿ ಎಂದು ಹೇಳಬೇಕಾಗುತ್ತದೆ. ಹಾಗೆಯೇ ವಿಶ್ವವಿದ್ಯಾನಿಲಯ-ಗಳಿಗೂ ಇಡಬೇಕಾಗುತ್ತದೆ.

ಮಾಡಲು ಉಳಿದಿರುವುದಾದರೂ ಏನು ? ಅತ್ಯಾಚಾರಕ್ಕೊಳ - ಗಾದವರಿಗೆ ಸಹಾಯ ನೀಡಲು ಯೋಚಿಸುವುದು ಒಂದು. ಆದರೆ ಅತ್ಯಾಚಾರವನ್ನೇ ಕೊನೆಗೊಳಿಸಬೇಕೆಂಬುದು ಮತ್ತೊಂದು. ಲೈಂಗಿಕ ದೌರ್ಜನ್ಯವನ್ನು ನಾವು ಕೊನೆಗೊಳಿಸಬೇಕಿದೆ. ಸೂಳೆಗಾರಿಕೆ, ಅಶ್ಲೀಲತೆಗೆ ನಾವು ಮುಕ್ತಾಯ ಹಾಡಬೇಕಾಗಿದೆ. ಅಂದರೆ ಯಾವನೋ ಗಂಡಸಿನ ವಿಕಾರದಿಂದ ಇವೆಲ್ಲ ನಡೆಯುತ್ತವೆ ಎಂಬ ಸಾಮಾನ್ಯತೆಯನ್ನು ನಾವು ತಿರಸ್ಕರಿಸಬೇಕಾಗಿದೆ.

ಬೇರೆ ಬೇರೆ ದೇಶಗಳಲ್ಲಿ ಪುರುಷರ ಪ್ರಭುತ್ವ ಬೇರೆ ಬೇರೆ ರೀತಿಯಲ್ಲಿ ಸಂಘಟಿತವಾಗಿದೆ. ಕೆಲವು ದೇಶಗಳಲ್ಲಿ ಹೆಂಗಸರು ಯೋನಿ ಕತ್ತರಿಸುವಿಕೆಯನ್ನು ಎದುರಿಸ ಬೇಕಾದರೆ, ಇನ್ನು ಕೆಲವು ದೇಶಗಳಲ್ಲಿ ಗರ್ಭಪಾತವನ್ನು ಬಲಾತ್ಕರಿಸಿ - ಹೆಣ್ಣು ಭ್ರೂಣಹತ್ಯೆ ಮಾಡಲಾಗುತ್ತದೆ. ಚೈನಾದಲ್ಲಿ ಸರ್ಕಾರವೇ ಗರ್ಭಪಾತವನ್ನು ಖಡ್ಡಾಯವಾಗಿಸಿದೆ. ಇಂಡಿಯಾದಲ್ಲಿ ಸ್ವತಂತ್ರ್ಯ ಮಾರ್ಕೆಟ್ ಆರ್ಥಿಕತೆಯು ಮಹಿಳೆಯರು ಸ್ತ್ರೀ ಶಿಶುವನ್ನು ಭ್ರೂಣ ಹತ್ಯೆ ಮಾಡುವಂತೆ ಒತ್ತಾಯಿಸಲಾಗುತ್ತಿದೆ. ಇಲ್ಲದಿದ್ದರೆ ಹೆಣ್ಣು ಶಿಶುವಿನ ಹತ್ಯೆ ನಡೆಯುತ್ತದೆ. ಗರ್ಭಪಾತದ ಪಾಲಿಸಿಗಳ ಬಗ್ಗೆ ಯೋಚಿಸಿ ನೋಡಿ, ಈ ಪಾಲಿಸಿಗಳು ಮಹಿಳೆಯರ ಜೀವನವನ್ನು ನಿರ್ಧರಿಸುತ್ತವೆ. ಅಮೇರಿಕಾದಲ್ಲಿ ಸರಪಳಿ ಕೊಲೆಗಾರರು ಹೆಚ್ಚಾಗುತ್ತಿದ್ದಾರೆ. ಇದು ಉಪ ಸಂಸ್ಕೃತಿಯಾಗಿ ಅಮೇರಿಕಾದಲ್ಲಿ ನೆಲೆಗೊಳ್ಳತೊಡಗಿದೆ.

ನನ್ನ ದೃಷ್ಟಿಯಲ್ಲಿ ನಾವು ಹೆಂಗಸರ ವಿರುದ್ಧ ಅಪರಾಧ ಎಸಗುವವರನ್ನು ಹೆಚ್ಚು ಪ್ರಶ್ನಿಸಬೇಕಾಗಿದೆ. ಆಕೆಗೆ ಯಾಕೆ ಹೀಗಾಯಿತು ? ಆಕೆಯ ತಪ್ಪು ಏನು ? ಆಕೆಯನ್ನು ಆತ ಏಕೆ ಆರಿಸಿದ ? ಆತ ಆಕೆಗೇಕೆ ಪೆಟ್ಟು ಮಾಡಬೇಕು ? ಆತ 'ಪ್ರಶ್ನೆ' ಆತನೇ ಸಮಸ್ಯೆ. ಆತನ ಹಿಂಸೆಯಲ್ಲಿ ನಾವು ಓಡುತ್ತೇವೆ, ತಪ್ಪಿಸಿಕೊಳ್ಳುತ್ತೇವೆ. ಬಚ್ಚಿಟ್ಟುಕೊಳ್ಳುತ್ತೇವೆ. ಹೀಗೆ ಲೈಂಗಿಕ ಹಿಂಸೆ, ಹಿಂಸೆಗೊಳಗಾದವರನ್ನು ವಲಸೆ ಕಳಿಸುವುದಕ್ಕೆ ಮಹಿಳಾ ಚಳುವಳಿ ನಿರಾಕರಿಸಬೇಕು. ಮಹಿಳಾ ಚಳುವಳಿ - ಮಕ್ಕಳು ಅತ್ಯಾಚಾರಕ್ಕೊಳಗಾಗುವ, ಹಿಂಸೆಗೊಳಗಾಗುವ ಕೌಟುಂಬಿಕ ರಚನೆ, ವ್ಯವಸ್ಥೆಯನ್ನು ಗಮನಿಸಬೇಕು.

ಸೂಳೆಗಾರಿಕೆ ಒಂದು ಸಮಸ್ಯೆ ಎಂದು ನಾವು ತಿಳಿದುಕೊಳ್ಳಬೇಕು. ಇದು ಸಾವು-ಬದುಕಿನ ಪ್ರಶ್ನೆ. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಸೂಳೆಗಾರಿಕೆ ಮಾಡುವ ಬಹುತೇಕ ಹೆಂಗಸರು ಬಾಲ್ಯದಲ್ಲಿ

ಅತ್ಯಾಚಾರಕ್ಕೊಳಗಾದವರು, ಮನೆ ಇಲ್ಲದವರು, ತಿರಸ್ಕರಿಸಲ್ಪಟ್ಟವರು. ನಾವು ಬದುಕನ್ನು ಹೃದಯದ ಕಾಳಜಿಯಿಂದ ನೋಡಬೇಕು, ಕರುಣೆಯಿಂದ ಅಲ್ಲ. ಮೂಲಭೂತ ಸಮಸ್ಯೆಗಳನ್ನು ಗಮನಿಸಬೇಕು. ಯಾರಿಗೆ ಏನೂ ಇಲ್ಲವೋ ಅಂತಹ ಹೆಂಗಸರು ಎದ್ದು ನಿಂತುಕೊಳ್ಳುವಂತೆ ಮಾಡಲು ನಾವು ಪ್ರಯತ್ನಿಸಬೇಕು. ಯಾವ ಹೆಂಗಸರಿಗೆ ಏನೂ ಇಲ್ಲವೆಂದರೆ, ಅವರಿಗೆ ಮನೆ, ಆಹಾರ, ವಸತಿ, ಓದು ಏನೂ ಇರುವುದಿಲ್ಲ. ಮಹಿಳೆಯರಿಗಾಗುವ ಗಾಯ, ಹಾಗೂ ಅವಮಾನಗಳನ್ನು ನಮ್ಮ ರಾಜಕೀಯ ವ್ಯವಸ್ಥೆ ತುಚ್ಛೀಕರಿಸುವಂತೆ ನಾವೂ ಮಾಡಬಾರದು.

ನಾವು ಸೂಳೆಗಾರಿಕೆಯನ್ನು ಒಪ್ಪಿಕೊಂಡೆ ಸ್ತ್ರೀವಾದದ ತಪ್ಪನ್ನು ಬದಲಾಯಿಸುವುದಕ್ಕೆ ಸಾಧ್ಯವಿಲ್ಲ . ಸೂಳೆಗಾರಿಕೆ ಒಂದು ಸರಪಳಿಯ ಅತ್ಯಾಚಾರ. ಅತ್ಯಾಚಾರಿ ಬದಲಾಗುತ್ತಾನೆ. ಆದರೆ ಅತ್ಯಾಚಾರಕ್ಕೊಳಗಾದ ಹೆಂಗಸು ಹಾಗೆಯೇ ಉಳಿದಿರುತ್ತಾಳೆ. ಹಣ ಪುರುಷನ ಕೈಗಳನ್ನು ಸ್ವಚ್ಛಗೊಳಿಸುತ್ತದೆ. ಇನ್ನು ಕೆಲವು ದೇಶಗಳಲ್ಲಿ ಮಹಿಳೆಯರನ್ನು ಲೈಂಗಿಕ ಗುಲಾಮರನ್ನಾಗಿ ಮಾರಲಾಗುತ್ತದೆ. ಕೆಲವು ಮಕ್ಕಳನ್ನೂ ಸಹ. ಕೆನಡಾ, ಅಮೇರಿಕಾದಲ್ಲಿ ಮಕ್ಕಳನ್ನು ದೌರ್ಜನ್ಯಕ್ಕೆ ಒಳಪಡಿಸುವ ಮೂಲಕ ಸೂಳೆಗಾರಿಕೆ ಹುಟ್ಟುಹಾಕಲಾಗುತ್ತದೆ. ಸ್ವತಂತ್ರ್ಯ ಆರ್ಥಿಕ ವ್ಯವಸ್ಥೆಗಳ ಗ್ರಾಹಕರು ಇರುವವರೆಗೂ ಮಕ್ಕಳ ಮೇಲೆ ಅತ್ಯಾಚಾರ, ನಿರಾಶ್ರಿತರನ್ನಾಗಿಸುವುದು ನಡೆಯುತ್ತಲೇ ಇರುತ್ತದೆ.. ನಾವು ಇದನ್ನು ಒಪ್ಪಿಕೊಳ್ಳಲು ಆಗುವುದಿಲ್ಲ. ಸೂಳೆಗಾರಿಕೆಯನ್ನು ಒಪ್ಪಿಕೊಳ್ಳಲು ಆಗುವುದಿಲ್ಲ.

ವಿವಾಹದೊಳಗಿನ ಲೈಂಗಿಕ ದೌರ್ಜನ್ಯವನ್ನು ನಾವು ಶಿಕ್ಷಾರ್ಹವಾಗಿಸಬೇಕಾಗಿದೆ. ಸೂಳೆಗಾರಿಕೆ, ವಿವಾಹದೊಳಗಿನ ಲೈಂಗಿಕ ಅತ್ಯಾಚಾರ ಇವೆರಡನ್ನೂ ಹೋಗಲಾಡಿಸುವುದು ಸವಾಲಿನ ಕೆಲಸವಾಗಿದೆ. ಪುರುಷರು ಇಂದು ಹೆಂಗಸರ ಯಜಮಾನರಾಗಿದ್ದಾರೆ. ದಾರಿಯಲ್ಲಿ ಹೆಂಗಸರನ್ನು ಕೊಳ್ಳುವುದು, ಮಾರುವುದು ನಡೆಯುವತನಕ ಅವರ ಯಜಮಾನ್ಯ ಇರುತ್ತದೆ. ವಿವಾಹದೊಳಗೆ ಅವರು ಅತ್ಯಾಚಾರ ನಡೆಸುತ್ತಾರೆಂದರೆ ಅವರ ಯಜಮಾನ್ಯ ಇದೆ. ನಾವು ಪದಗಳಲ್ಲಿ, ಕ್ರಿಯೆಗಳಲ್ಲಿ, ಸಾಮಾಜಿಕ ಪಾಲಿಸಿಯಲ್ಲಿ, ಕಾನೂನುಗಳಲ್ಲಿ ಪುರುಷರು ಹೆಂಗಸರ ಯಜಮಾನರಲ್ಲ ಎಂದು ನಾವು ಸಾರಿ ಹೇಳಬೇಕಾಗಿದೆ. ಇದನ್ನು ಮಾಡಲು ನಮಗೆ ರಾಜಕೀಯ ಶಿಸ್ತು ಬೇಕು. ನಮ್ಮ ಲೈಂಗಿಕ ದೌರ್ಜನ್ಯದ ಪರಿಣಾಮಗಳನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕಾಗಿದೆ. ದೌರ್ಜನ್ಯ ನಮ್ಮನ್ನು ಸಾವಿರಾರು ಹೋಳುಗಳನ್ನಾಗಿ ಮಾಡಿದೆ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಹೋಳುಗಳು ನಮ್ಮ ಹೃದಯದೊಳಗೆ ಕುಣಿಯುತ್ತಿರುತ್ತವೆ. ನಮ್ಮನ್ನು ಸಾಯಿಸುತ್ತಿರುತ್ತವೆ. ಇದನ್ನು ಹೊತ್ತುಕೊಂಡೇ ನಾವು ಸಾಗಬೇಕು. ನಾವು ತಾಳಿಕೊಳ್ಳುವುದರಲ್ಲಿ ನಾಯಕರಾಗಿದ್ದೇವೆ. ಪ್ರತಿರೋಧಿಸುವಲ್ಲಿ ಹೇಡಿಗಳಾಗಿದ್ದೇವೆ.

ಪ್ರಪಂಚದಾದ್ಯಂತ ಮಹಿಳೆಯರ ಮಾರಾಟ ನಡೆಯುತ್ತಿದೆ. ಮಹಿಳೆಯರ ಸ್ವಾತಂತ್ರ್ಯ ನಮಗೆ ಮುಖ್ಯ. ಅವರ ದೇಹಗಳನ್ನು ವಸಾಹತುಶಾಹಿಯನ್ನಾಗಿಸುವುದನ್ನು ನಾವು ತಡೆಯಬೇಕಿದೆ. ನೀವು ಹೇಳುವುದನ್ನೆಲ್ಲ ನಾವು ಒಪ್ಪಿಕೊಳ್ಳುವುದಿಲ್ಲ ಎಂದು ತಿರಸ್ಕರಿಸಬೇಕಾಗಿದೆ. ಮಹಿಳೆಯರಾಗಿ ನಮಗೇನು ರಾಜಕೀಯ ಹಕ್ಕು ಬೇಕು ಎಂಬುದನ್ನು ನಾವು ಕೇಳಿಕೊಳ್ಳಬೇಕಾಗಿದೆ. 18ನೆಯ ಶತಮಾನದ ರಾಜಕೀಯ ಪುರುಷ ಬುದ್ಧಿ ಜೀವಿಗಳು ನಮ್ಮ ಪ್ರಶ್ನೆಗೆ ಉತ್ತರ ನೀಡಿದ್ದಾರೆಂದು ನಾವು ಭಾವಿಸುವುದು ಬೇಡ. ಮತ್ತೆ ಬರೆಯಲ್ಪಟ್ಟ ಚಾರ್ಟರ್ ನಿಂದ 20ನೆಯ ಶತಮಾನದಲ್ಲಿ ನಮ್ಮ ಪ್ರಶ್ನೆಗೆ ಉತ್ತರ ಸಿಗುತ್ತದೆಯೆಂದು ನಾವು ಭಾವಿಸುವುದೂ ಬೇಡ. ನಮಗೇನು ಕಾನೂನು ಬೇಕು ? ನಮಗೇನು ಸ್ವತಂತ್ರ ಬೇಕು ? ನಮ್ಮ ಒಳ್ಳೆಯ ಜೀವನಕ್ಕೆ ನಮಗೇನು ತತ್ವ ಬೇಕು? ನಾವೇನು ಕ್ರಿಯೆ ಕೈಗೊಳ್ಳಬೇಕು ? ಇದಕ್ಕೆ ನಾವೇನು ಬೆಲೆ ತೆರಬೇಕು ? ಬೆಲೆ ತೆರಲು ನಾವೇಕೆ ಹೆದರುತ್ತೇವೆ ? ಮಹಿಳಾ ಚಳುವಳಿಯಿಂದ ಅಲ್ಪ-ಸ್ವಲ್ಪ ಪಡೆದುಕೊಂಡ ಹೆಂಗಸರು ಪ್ರತಿರೋಧಕ್ಕೆ, ಹೋರಾಟಕ್ಕೆ ಅಥವಾ ರಾಜಕೀಯ ವಿಚಾರಣೆಗಳಿಗೆ ಏಕೆ ಹೆದರುತ್ತಾರೆ ? ಇದರಿಂದ ನಾವು ಗಳಿಸಿಕೊಂಡದ್ದು ಹೋಗಿ ಬಿಡಬಹುದೆನ್ನುವ ಭಯವೇ ? ನಾವೇಕೆ ಒಂದಾದ ಮೇಲೊಂದು ಎಂಬಂತೆ ಪುರುಷರ ಜೊತೆ ವ್ಯವಹರಿಸುತ್ತೇವೆ ನಾವು? ಒಗ್ಗಟ್ಟಾಗಿ ನಮಗೆ ಬೇಕಾಗಿರುವುದನ್ನು ಏಕೆ ಬೇಡಿಕೆಯಾಗಿ ಕೇಳುತ್ತಿಲ್ಲ ? ಎಲ್ಲಿಯವರೆಗೆ ಹೆಂಗಸರನ್ನು ಕೊಳ್ಳುವ / ಮಾರುವ ವ್ಯಾಪಾರವಿರುತ್ತದೋ ಅಲ್ಲಿಯವರೆಗೆ ಮಹಿಳೆಯರು ಸ್ವತಂತ್ರ್ಯರಲ್ಲ. ನಿಮಗೂ ಸಂಖ್ಯೆಯಿದೆ. ಒಂದು ದಿನ ನಿಮ್ಮ ಸರದಿಯೂ ಬರುತ್ತದೆ. ಸೂಳೆಯರನ್ನು, ಒದೆ ತಿಂದವರನ್ನು, ಹಿಂಸೆಗೊಳಗಾದವರನ್ನ, ಸತ್ತವರನ್ನ, ಅತ್ಯಾಚಾರಕ್ಕೊಳಗಾದ-ವರನ್ನ ನೆನಪಿಸಿಕೊಳ್ಳಿ ಎಂದು ನಿಮಗೆ ಹೇಳುತ್ತಿದ್ದೇನೆ. ಈ ರೀತಿ ಅಪರಾಧಗಳಿಗೆ ತುತ್ತಾದವರನ್ನ ಇಂದು ರಾತ್ರಿ ಮಾತ್ರವಲ್ಲ, ನಾಳೆ, ನಾಡಿದ್ದು, ಹೀಗೇ ನೆನಪಿಸಿಕೊಳ್ಳಿ, ನೀವೇನು ಮಾಡಬಲ್ಲಿರಿ? ನೀವೇನು ಯೋಚಿಸುತ್ತೀರಿ ? ಹೇಗೆ ಕ್ರಿಯಾಶೀಲರಾಗುತ್ತೀರಿ ? ಹೇಗೆ ಕಾಳಜಿ ವಹಿಸಬಲ್ಲಿರಿ ? ನಿಮ್ಮ ಬದುಕಿನ ಅರ್ಥ ನಿಮಗೆ ಏನು ? ನಾನು ನಿಮ್ಮನ್ನು ಕೇಳುವುದಿಷ್ಟೆ-ಪ್ರತಿರೋಧಿಸಿ, ಪುರುಷಾಧಿಕಾರವನ್ನು ಒಪ್ಪಿಕೊಳ್ಳಲು ತಿರಸ್ಕರಿಸಿ, ನೀವು ಬೆಲೆ ತೆರಬೇಕಾಗಿದ್ದಾಗ್ಯೂ ನಿಮಗೇನು ಬದಲಾಯಿಸಲು ಸಾಧ್ಯವೋ ಅದನ್ನು ಮಾಡಿ.

ಆ್ಯಂಡ್ರೂ ಡ್ವೋರ್‌ಕಿನ್

ಇರಾನ್‌ನ ಆಟಗಾರ್ತಿ

ನಾಸಿಮ್ ಹಾಸನ್‌ಪೋರ್

ಅಥೆನ್ಸ್ ಒಲಿಂಪಿಕ್ಸ್ ಆಟಗಳಿಗೆ ಇರಾನಿನಿಂದ ಭಾಗವಹಿಸಿರುವ ಒಬ್ಬಳೇ ಒಬ್ಬಳು ಮಹಿಳೆಯ ಹೆಸರು ನಾಸಿಮ್ ಹಾಸನ್‌ಪೋರ್. ಆಕೆ ಭಾಗವಹಿಸುತ್ತಿರುವುದು 'ಶೂಟಿಂಗ್' ಸ್ಪರ್ಧೆಗೆ. ಈ ಸ್ಪರ್ಧೆಯಲ್ಲಿ ಗೆಲ್ಲುತ್ತೇನೆಂಬ ಯಾವ ಭ್ರಮೆಯೂ ಆಕೆಗಿರಲಿಲ್ಲ: ನಿಜವೆಂದರೆ 'ಆಟ' ತನ್ನ ನಿಜವಾದ ಇಷ್ಟವಲ್ಲವೆಂದೇ ಆಕೆ ನುಡಿಯುವುದು.

ಆಕೆ ಹೇಳುವ ಪ್ರಕಾರ 'ಡ್ರೆಸ್ ಕೋಡ್' ಒಂದು ದೊಡ್ಡ ಸಮಸ್ಯೆಯಾಗಿರದಿದ್ದರೆ, ಆಕೆ ಜಿಮ್ನಾಸ್ಟಿಕ್‌ನಲ್ಲಿ ಮುಂದುವರಿಯು - ವವಳಾಗಿರುತ್ತಿದ್ದಳು. ಏಕೆಂದರೆ ಮೂರು ವರ್ಷದವಳಿರುವಾಗಿನಿಂದ ಆಕೆಗೆ ಜಿಮ್ನಾಸ್ಟಿಕ್ಸ್‌ನಲ್ಲಿ ಬಹಳ ಆಸ್ಥೆ ಇತ್ತು. 19 ವರ್ಷದ ನಾಸಿಮ್ ಹಾಸನ್‌ಪೋರ್‌ಗೆ ಈ ಹಂತದಲ್ಲಿ 'ಡ್ರಸ್ ಕೋಡ್' ಒಂದು ದೊಡ್ಡ ಸಮಸ್ಯೆಯಾಗಿದೆ.

ಇಸ್ಲಾಮಿಕ್ ರಿಪಬ್ಲಿಕ್ ಬಿಗಿಯಾದ ಉಡುಪುಗಳು ಹೆಂಗಸರಿಗಲ್ಲ ಎಂಬ ದೃಷ್ಟಿಕೋನ ಹೊಂದಿದೆ. ಹಾಗಾಗಿ ನಾಸಿಮ್ ಹಾಸನ್‌ಪೋರ್ ತಲೆವಸ್ತ್ರ ಹಾಗೂ ಉದ್ದವಾದ ನಿಲುವಂಗಿ ಧರಿಸಿ (ಬುರ್ಕಾ) ಆಡುವಂತಹ ಆಟಗಳನ್ನು ಮಾತ್ರ ಆಡಬಹುದಿತ್ತು. ಈ ನಿಯಮದಿಂದಾಗಿ ಜಿಮ್ನಾಸ್ಟಿಕ್, ಈಜು, ಟ್ರ್ಯಾಕ್ ಹಾಗೂ ಮೈದಾನದ ಆಟಗಳನ್ನು, ಅಥವಾ ಬೀಚ್ ವಾಲಿಬಾಲನ್ನು ಆಡುವುದಕ್ಕೆ ಮಹಿಳೆಯರಿಗೆ ನಿಷೇಧವಿದೆ.

ಹಾಗಾಗಿ ನಾಸಿಮ್ 'ಶೂಟಿಂಗ್' ಆಟವನ್ನು ಆಯ್ಕೆಮಾಡಿಕೊಂಡಳು. ಇದು ಬಹುಶಃ ಆಕೆ ತೋರುತ್ತಿರುವ ಪ್ರತಿಭಟನೆಯೂ ಕೂಡಾ ಇರಬಹುದು. ಆಕೆ ತಲೆ ಹಾಗೂ ಶರೀರಕ್ಕೆ ಕರಿ ಬಣ್ಣದ ವಸ್ತ್ರ ಧರಿಸಿ 'ಶೂಟಿಂಗ್' ಮಾಡಬಹುದು. ಆದಗ್ಯೂ ನಾಸಿಮ್ ಹಾಸನ್ ಪೋರ್ ಇರಾನಿನ ಚರಿತ್ರೆಯ, ರಾಜಕೀಯ ಪುಟಗಳ ಅಭಿವ್ಯಕ್ತಿಯಾಗಿಯೇ ಕಾಣಿಸಿಕೊಳ್ಳುತ್ತಾಳೆ.

ನಿಜವೆಂದರೆ ನಾಸಿಮ್ 'ಶೂಟಿಂಗ್'ನ್ನು ಗಂಭೀರವಾಗಿ ತೆಗೆದುಕೊಂಡವಳೇ ಅಲ್ಲ. 'ಶೂಟಿಂಗ್' ಹೈಸ್ಕೂಲ್‌ನಲ್ಲಿ ಆಕೆಗೆ ಪಠ್ಯವಾಗಿದ್ದಾಗ್ಯೂ ಸಹ ಇದರ ಬಗ್ಗೆ ಆಕೆಗೇನೂ ಅಷ್ಟು ಒಲವಿರಲಿಲ್ಲ. ಆಕೆ ತನ್ನ ಊರಾದ ಇರಾನಿನ ಟಾಯಬ್ರಿಜ್‌ನಲ್ಲಿ ಈ ಆಟದ ಹೈಸ್ಕೂಲಿಗೆ ಹೋಗುತ್ತಿದ್ದಳು.

ಆಕೆಗೆ ಪ್ರಾಣಿಗಳೆಂದರೆ ಇಷ್ಟ. ಆಕೆಯ ಹತ್ತಿರ ಎರೆಡು ನಾಯಿಗಳಿವೆ. ಆಕೆ 'ಶೂಟಿಂಗ್' ನ್ನು ಯಾವಾಗಲೂ ಬೇಟೆಯಾಡುವುದರ ಜೊತೆ ಸಮೀಕರಿಸುತ್ತಿದ್ದಳು.

ಆದರೆ ಆಕೆಯ 'ಶೂಟಿಂಗ್' ನ ಪ್ರತಿಭೆಯನ್ನು ಮೂರು ವರ್ಷಗಳ ಹಿಂದೆ ಗುರುತಿಸಿ, ಆಕೆಯ ಈ ಪ್ರತಿಭೆಯನ್ನು ಬೆಳೆಸುವ ಕಾರ್ಯ ಮುಂದುವರಿಯಿತು. ಹಾಸನ್‌ಪೋರ್ ಈ ಅವಕಾಶವನ್ನು ಉಪಯೋಗಿಸಿಕೊಂಡು ವಿದೇಶಕ್ಕೆ ಪ್ರಯಾಣ ಬೆಳೆಸಲು ಇಚ್ಛಿಸಿದ್ದಳು. ಆಕೆಯ ವಯಸ್ಸಿನ ಅನೇಕರಿಗೆ ಆರ್ಥಿಕ ಹಾಗೂ ವೀಸಾದ ಮಿತಿಗಳಿಂದ ಹೀಗೆ ವಿದೇಶಕ್ಕೆ ಪ್ರಯಾಣ ಮಾಡುವುದೇ ಕನಸಿನ ಮಾತಾಗಿದೆ.

ನಾಸಿಮ್ ಹಾಸನ್‌ಪೋರ್‌ಗೆ ಆಟವೆಂದರೆ ಜೀವವೆಂದೇನು ಅಲ್ಲ. ಆದರೆ ಆಕೆ ಆಟಕ್ಕಾಗಿ ಒಲವನ್ನು ಬೆಳೆಸಿಕೊಂಡಿದ್ದಾಳೆ ಅಷ್ಟೇ.

ಇರಾನಿನಲ್ಲಿ ಮಹಿಳಾ ಆಟಗಾರರಿಗೆ ಹೆಚ್ಚು ರೀತಿಯ ಸೌಲಭ್ಯಗಳು ಇಲ್ಲ ಎನ್ನುವುದು ನಾಸಿಮ್‌ಳ ಅಳಲು. ಆಟಗಾರ್ತಿಯರು ಸ್ಪರ್ಧೆಯಲ್ಲಿ ಭಾಗವಹಿಸಿದಾಗಲೂ ಅವುಗಳನ್ನು ಮುಕ್ತವಾಗಿ ನಡೆಸುವುದಿಲ್ಲ. ಪತ್ರಿಕೆಗಳಿಗೆ ಈ ವಿಚಾರ ತಲುಪುವುದೇ ಇಲ್ಲ. ಹಾಗಾಗಿ ಯಾವ ಮಹಿಳೆಗೂ 'ಪ್ರಾಯೋಜನೆ' (Sponsorship)ಗಳು ಸಿಕ್ಕುವುದೇ ಇಲ್ಲ.

ನಾಸಿಮ್ ಹಾಸನ್‌ಪೋರ್ ಆಕೆಯ ಉಳಿತಾಯದ ಎಲ್ಲಾ ಹಣವನ್ನೂ ಖರ್ಚು ಮಾಡುವುದರೊಂದಿಗೆ ಆಕೆಯ ತಾಯಿಯಿಂದಲೂ ಸಾಲ ಪಡೆದಿದ್ದಾಳೆ. ಜೊತೆಗೆ ರೋಲರ್ - ಬ್ಲ್ಯಾಡಿಂಗ್ ಕೋಚ್ ಆಗಿ ಕೆಲಸ ಮಾಡುವುದೂ ಸಹ ಆಕೆಯ ಆದಾಯವನ್ನು ಹೆಚ್ಚಿಸಿದೆ ಎಂದು ಆಕೆ ಹೇಳುತ್ತಾಳೆ.

ಏಷಿಯನ್ ಆಟಗಳಲ್ಲಿನ ಆಕೆಯ ಸಾಧನೆ ಆಕೆ ಒಲಿಂಪಿಕ್ಸ್‌ಗೆ ಹೋಗುವಷ್ಟು ಮಟ್ಟದ್ದಾಗಿರಲಿಲ್ಲ, ಆದರೆ ಆಕೆ 'ಏರ್ ಪಿಸ್ತೂಲ್' ಸ್ಪರ್ಧೆಯಲ್ಲಿ ವೈಲ್ಡ್‌ಕಾರ್ಡನ್ನು ಗೆದ್ದಿದ್ದರಿಂದ ಆಗಸ್ಟ್ 15 ರಂದು ನಡೆಯುವ ಈ ಆಟಕ್ಕೆ ಅಥೆನ್ಸ್ ನಲ್ಲಿ ಈಕೆ ಭಾಗವಹಿಸಿದ್ದಳು.

ಮನೆಯಲ್ಲಿರುವ, ಹಾಗೂ ಹತಾಶರಾಗಿರುವ ಇರಾನಿನ ಮಹಿಳೆಯರು ಅನೇಕ ಆಟಗಳಲ್ಲಿ ಭಾಗವಹಿಸಲು ಪ್ರಯತ್ನಿಸುತ್ತಾರೆ. ಆದರೆ ಅಂತರ್‌ರಾಷ್ಟ್ರೀಯ ಆಟಗಳಲ್ಲಿ ಭಾಗವಹಿಸಲು ಸಾಧ್ಯವಾಗದಿದ್ದರಿಂದ ಒಲಿಂಪಿಕ್ಸ್‌ಗೆ ಬರಲು ಆಗುವುದಿಲ್ಲ. ಇರಾನಿನ ಆಟಗಾರ್ತಿಯರ ಕನ್ಸಲ್‌ಟೆಂಟ್ ಒಬ್ಬರ ಪ್ರಕಾರ ಇರಾನಿನ ಮಹಿಳೆಯರು ಆಟದಲ್ಲಿ ಉತ್ತಮ ಸಾಧನೆ ಗೈಯುವುದಿಲ್ಲ. ಏಕೆಂದರೆ ಅವರು ಅವರಿಗೆ ಇಷ್ಟವಾಗುವ ಆಟಗಳಲ್ಲಿ ಭಾಗವಹಿಸುವುದಿಲ್ಲ. ಅವರು ಆಟಗಳ ಮೂಲಕ ವಿದೇಶದ ಪ್ರಯಾಣಕ್ಕೆ ಎದುರು ನೋಡುವಂತಾಗಿದೆ.

ಇರಾನಿನ ಆಟಗಾರ್ತಿಯರ ಇಂದಿನ ಸ್ಥಿತಿ-ಬಹುಶಃ ಅಲ್ಲಿನ ಮಹಿಳೆಯರು ಅನುಭವಿಸುತ್ತಿರುವ ನೋವು / ವೇದನೆಗಳನ್ನು ಪ್ರಚುರಪಡಿಸುತ್ತದೆ. ಮನಸ್ಸಿರುವ ಆಟಗಳನ್ನು ಆಡಲಾರದ ಅವರು ಸಾಧನೆಗಳತ್ತ ಹೇಗೆ ಮುಖ ಮಾಡಿಯಾರು ?

ಆಧಾರ 'ಡೆಕನ್ ಹೆರಾಲ್ಡ್'
ಸಂಡೇ ಅಗಸ್ಟ್ 8

ಕನ್ನಡ ಸಾಹಿತ್ಯ ಚರಿತ್ರೆ ಮತ್ತು ಮಹಿಳಾ ಸಾಹಿತ್ಯ

ಡಾ।ಬಿ.ಎನ್.ಸುಮಿತ್ರಾಬಾಯಿ

ಕಳೆದ ಇಪ್ಪತ್ತನೆಯ ಶತಮಾನದ ಏಳೆಂಟು ದಶಕಗಳವರೆಗೂ ಮಹಿಳಾ ಬರಹದ ಸತ್ವ ಸ್ಥಾನಗಳನ್ನು ಗ್ರಹಿಸುವ ಮತ್ತು ಗುರುತಿಸುವ ಕ್ರಮ ಹೆಚ್ಚು ಕಡಿಮೆ ಒಂದೇ ರೀತಿಯದಾಗಿತ್ತು. ಆವರೆಗೆ ಕನ್ನಡ ವಿಮರ್ಶಕರು, ಚರಿತ್ರಕಾರರೂ ಹೊಂದಿದ ನಿಲುವು ಯಾವುದೆಂಬುದನ್ನು ಪ್ರೊ.ಎಲ್.ಎಸ್. ಶೇಷಗಿರಿರಾಯರ ಈ ಒಂದು ಮಾತು ಪ್ರತಿನಿಧಿಸಬಲ್ಲದು :

> "ಸಾಹಿತ್ಯಕ್ಕಾಗಲಿ ಸಾಹಿತ್ಯ ವಿಮರ್ಶೆಗಾಗಲಿ ಲಿಂಗವಿಲ್ಲ, ವಯಸ್ಸಿಲ್ಲ ಇದನ್ನು ನೆನಪಿಟ್ಟುಕೊಂಡು ವಿವೇಚಿಸಿದಾಗ, ಒಟ್ಟಿನಲ್ಲಿ ಮಹಿಳೆಯರು ಕೊಟ್ಟಿರುವ ಕೊಡುಗೆ ಗಮನಾರ್ಹವಾದರೂ ವಿಶೇಷವಾದುದಲ್ಲ ಎಂದು ಹೇಳಬೇಕಾಗುತ್ತದೆ. ಸಾಮಾನ್ಯವಾಗಿ ಕೌಟುಂಬಿಕ ಜೀವನ ಇದರ ಕಥಾವಸ್ತು; ಹೃದಯದ ಶ್ರೀಮಂತಿಕೆ ಇವರ ವಸ್ತು" (ಆಧುನಿಕ ಕನ್ನಡ ಸಾಹಿತ್ಯ ಚರಿತ್ರೆ, ಪು.158)

ಸಾಮಾನ್ಯವಾಗಿ ಪಿತೃಸಂಸ್ಕೃತಿಯಲ್ಲಿ ಪರಂಪರಾಗತವಾಗಿ ರೂಢಿಯಲ್ಲಿರುವ ಒಂದು ಚಿಂತನೆಯನ್ನೇ ಈ ಮೇಲಿನ ಮಾತುಗಳು ಪುನರುಚ್ಚರಿಸಿವೆ. ಸಾಹಿತ್ಯಕ್ಕೆ ಲಿಂಗವಿಲ್ಲ, ಜಾತಿಯಿಲ್ಲ, ವರ್ಗವಿಲ್ಲ, ಅದು ನಿಷ್ಪಕ್ಷಪಾತಿಯಾದದ್ದು ಎಂಬುದು ಒಂದು ರೀತಿ ಮಾನವಾತೀತ ವಸ್ತುನಿಷ್ಠೆಯ ಆದರ್ಶದ ನೆಲೆಯಲ್ಲಿ ಸಾಹಿತ್ಯ/ವಿಮರ್ಶೆಗಳು ಇರಬಲ್ಲವು ಎಂಬ ಒಂದು ಆದರ್ಶವಾದಿ ವಿಚಾರ. ಆದರೆ ವಾಸ್ತವದಲ್ಲಿ ಸಾಹಿತ್ಯ, ಅದನ್ನು ಸೃಷ್ಟಿಸುವ ಪ್ರಜ್ಞೆ, ಆ ಪ್ರಜ್ಞೆಯನ್ನು ರೂಪಿಸುತ್ತಿರುವ ಸಾಂಸ್ಕೃತಿಕ ಪರಿಸರಗಳ ಮೂಲಕವಾಗಿಯೇ ಸಾಹಿತ್ಯವನ್ನು ಅಳೆಯುವ ವಿಮರ್ಶಾ ಮಾನದಂಡಗಳೂ ಹುಟ್ಟಿರುತ್ತವೆ. ಆದ್ದರಿಂದ ಪ್ರಜ್ಞಾಪೂರ್ವಕವಾಗಿ ತಾನು ನಿಷ್ಪಕ್ಷಪಾತಿ ಎಂದುಕೊಂಡು ಬರೆಯುವಾಗ ಕೂಡ ಒಳಮನದ ಆಳದಲ್ಲಿ ಸಂಸ್ಕೃತಿಯಿಂದ ರೂಢಿಸಲ್ಪಟ್ಟಿರುವ ನಂಬಿಕೆಗಳು, ತಾರತಮ್ಯಗಳು ಬರಹದೊಳಗೆ ತೂರಿಬರಬಲ್ಲದು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪುರುಷನೇ ಸತ್ಯದ ವಕ್ತಾರ ಹಾಗೂ ಅದನ್ನು ವ್ಯಾಖ್ಯಾನಿಸುವವನೂ ಆಗಿರುತ್ತಾನೆ. ತಾನು ಹೇಳುತ್ತಿರುವುದೇ ಸತ್ಯವೆಂದು ನಂಬಿಸಬಲ್ಲ ತಾತ್ವಿಕತೆಯ ಬಲವಾದ ಕೋಟೆದೊಳಗೆ ನಿಂತು, ಆ ನಿಲುವಿನಿಂದ ಆತ ಮಾಡಬಹುದಾದ ಯಾವುದೇ ವಿಮರ್ಶೆಯಾಗಲಿ, ಆದರಿಂದ ಹುಟ್ಟುವ 'ಶ್ರೇಷ್ಠ ಸಾಹಿತ್ಯ' ಪರಂಪರೆ ಎಂಬುದಾಗಲಿ (ಸ್ತ್ರೀಯರ ವಿಷಯವಾಗಿ ಸಮಾಜದಲ್ಲಿ ಹೇಗೋ ಹಾಗೆಯೇ) ಅಂಚಿನ ನೆಲೆಯಲ್ಲಿಯೇ ಮಹಿಳಾ ಸಾಹಿತ್ಯವನ್ನು ಉಳಿಸಿರುತ್ತದೆ ಎಂಬ ವಿಚಾರ ಕಳೆದ ಶತಮಾನದ ಎಂಬತ್ತರ ದಶಕದಿಂದ ಈಚೆಗೆ ಪ್ರಚಾರಕ್ಕೆ ಬಂದಿದ್ದು, ಸ್ತ್ರೀವಾದಿ ವಿಮರ್ಶೆಯು ಬೆಳೆಸಿರುವ ಈ ವಿಚಾರದ ಕಾರಣದಿಂದಾಗಿಯೇ ಎರಡು ದಶಕಗಳಿಂದ ಈಚೆಗೆ ಮಹಿಳಾ ಸಾಹಿತ್ಯವನ್ನು ಗಮನಿಸುವ ನಿಟ್ಟಿನಲ್ಲಿ ಗಮನಾರ್ಹವಾದ ಬೆಳವಣಿಗೆಗಳು ಕಾಣಿಸುತ್ತವೆ.

ನಿರ್ಲಕ್ಷ್ಯಕ್ಕೊಂದು ಮಹಾರೂಪಕ : ಕಳೆದ ಶತಮಾನದಲ್ಲಿ ಸುಮಾರು 80 ವರ್ಷಕಾಲ ಮಹಿಳಾ ಸಾಹಿತ್ಯ ಎಂದರೆ ಕೇವಲ ಕೆಲವು ಹೆಸರುಗಳ ಪಟ್ಟಿ ಅಥವಾ ಅದೂ ಇಲ್ಲ ಎಂಬ ಸ್ಥಿತಿಯನ್ನು ಸಾಹಿತ್ಯ ಚರಿತ್ರೆಯ ಗ್ರಂಥಗಳಲ್ಲಿ ಕಾಣುತ್ತೇವೆ ಏಕೆ ? ಉದಾಹರಣೆಗೆ 1913 ರಿಂದ ಸುಮಾರು ನಾಲ್ಕು ದಶಕಗಳ ಕಥೆ, ಕಾದಂಬರಿ, ನಾಟಕ, ಕಾವ್ಯ, ಪ್ರಬಂಧಗಳನ್ನು ನಿರಂತರವಾಗಿ ರಚಿಸಿದ್ದು, ಮಹಿಳಾ ಪತ್ರಿಕೋದ್ಯಮ ಹಾಗೂ ಪ್ರಕಾಶನ ಕ್ಷೇತ್ರಗಳಿಗೆ ಗಮನಾರ್ಹವಾಗಿ ಸೇವೆಸಲ್ಲಿಸಿದ ನಂಜನಗೂಡು ತಿರುಮಲಾಂಬಾ ಹಾಗೂ ಅವರ ಸಮಕಾಲೀನರಾದ ಅನೇಕ ಲೇಖಕಿಯರು ಕನ್ನಡ ಸಾಹಿತ್ಯ ಚರಿತ್ರೆಯ ಗ್ರಂಥಗಳಿಂದ ನಾಪತ್ತೆಯೇ ಆಗಿದ್ದರು. ತಿರುಮಲಾಂಬಾ ಅವರೇ ಮೊಟ್ಟ ಮೊದಲ ಆಧುನಿಕ ಲೇಖಕಿ ಎಂಬುದನ್ನು ಚರಿತ್ರೆಯಲ್ಲಿ ಹುಡುಕಿ, ಶೋಧಿಸಿ ಎತ್ತಿ ಹಿಡಿದು ಸಾಹಿತ್ಯ ಚರಿತ್ರೆಗೆ ಆಕೆ ಸಲ್ಲುವಂತೆ ಮಾಡಿದ ಕೀರ್ತಿ ದಿ.ಚಿ.ನ. ಮಂಗಳ ಅವರಿಗೆ ಸಲ್ಲುತ್ತದೆ. ಮಂಗಳ ಅವರ ಈ ಶೋಧನೆ ತಿರುಮಲಾಂಬಾ ಬಗ್ಗೆ ಮತ್ತಷ್ಟು ಸಂಶೋಧನೆ, ಅವರ ಬದುಕು ಬರಹಗಳ ಮರು ಅಧ್ಯಯನ, ಪ್ರಕಟಣೆಗಳಿಗೆ ಬಾಗಿಲು ತೆರೆಯಿತು. ಇದೆಲ್ಲ ನಡೆದದ್ದು ಆ ಲೇಖಕಿಯ ಬದುಕಿನ ತೀರಾ ಕೊನೆಗಾಲಕ್ಕೆ. ಅಲ್ಲಿಯವರೆಗೆ ನಮ್ಮ ಸಾಹಿತ್ಯ ಚರಿತ್ರೆಕಾರರು ಏಕೆ ಕಣ್ಣುಮುಚ್ಚಿ ಕುಳಿತಿದ್ದರು ಎಂಬುದನ್ನು ಕೇಳಿಕೊಳ್ಳಬೇಕಾಗುತ್ತದೆ.

ತಿರುಮಲಾಂಬಾ ಚರಿತ್ರೆಯಿಂದ ಕಣ್ಮರೆಯಾಗಿದ್ದೇ ಒಂದು ಚರಿತ್ರೆಯಾಗಿದ್ದು ಅದು ಕನ್ನಡದ ಅನೇಕ ಲೇಖಕಿಯರ ಚರಿತ್ರೆಯ ಮಹಾರೂಪಕವೆ ಆಗಿದೆಯೆನ್ನಬಹುದು. ತಮ್ಮ 'ಸತೀ ಹಿತೈಷಿಣೀ ಗ್ರಂಥಮಾಲಾ' ಎಂಬ ಪ್ರಕಾಶನದ ಮೂಲಕ ಆಕೆ 1913 ರಿಂದ 1939ರ ವರೆಗೆ ನಿರಂತರವಾಗಿ ಪ್ರಕಟಿಸುತ್ತ ಬಂದಿದ್ದ ಬರಹಗಳಲ್ಲಿ ಏಳು ಕಾದಂಬರಿಗಳನ್ನು ಕುರಿತು ಅವರ ಸಮಕಾಲೀನರೇ ಆಗಿದ್ದ ಮಾಸ್ತಿ ವೇಕಟೇಶ ಅಯ್ಯಂಗಾರರು ಒಂದು ದೀರ್ಘವಾದ, ಕಟುವಾದ ವಿಮರ್ಶೆ ಬರೆದರು. ಆ ವಿಮರ್ಶೆ ಮುಂದಿನ ಅನೇಕ ನವೋದಯ ವಿಮರ್ಶಕರ ದೃಷ್ಟಿಕೋನವನ್ನು ರೂಪಿಸಿತು. ಎ.ಆರ್. ಕೃಷ್ಣಶಾಸ್ತ್ರಿ, ಎಂ.ಆರ್.ಶ್ರೀ ಮೊದಲಾದ ಹೆಸರಾಂತ ಬರಹಗಾರರು ತಿರುಮಲಾಂಬಾ ಬರಹದಲ್ಲಿನ ಅಸಾಂಗತ್ಯ, ಅವಾಸ್ತವ ಲಕ್ಷಣ, ಭಾಷೆಯ ಆಡಂಬರದ ವಿದ್ವತ್ತು, ಕಲ್ಪನೆಗಳ ಅಸಹಜತೆ, ಉಪದೇಶಪರತೆ ಮೊದಲಾದ ಅನೇಕ ಕೊರತೆಗಳನ್ನೇ ಎತ್ತಿ ಹೇಳಿ ಅಕೆಯ ಇಡೀ ಬರಹಗಳ ಮೂಲಭೂತ ಆಶಯ ಸ್ತ್ರೀಯರ ಶೈಕ್ಷಣಿಕ ಕಳಕಳಿಯದಾಗಿತ್ತು ಎಂಬುದನ್ನೇ ನಿರ್ಲಕ್ಷಿಸಿ, ಅವರನ್ನು ಚರಿತ್ರೆಯಿಂದಲೇ ಬದಿಗೆ ಸರಿಸಿಟ್ಟರು-ಎಂಬುದು ಇದೀಗ ಚರಿತ್ರೆಯಲ್ಲಿ ದಾಖಲಾಗಿಹೋಗಿರುವ ಸಂಗತಿ.

ಮಾನ್ಯತೆಯ ಇನ್ನೊಂದು ಮುಖ : ಒಬ್ಬ ಲೇಖಕಿ, ತನ್ನ ಸಮಕಾಲೀನ ಪ್ರಮುಖವಾದ ಸಾಹಿತ್ಯಧೋರಣೆಗಳಿಗೆ ಸ್ಪಂದಿಸದೆ ಅಂದಿನ ಸಾಹಿತ್ಯಮಾನದಂಡಗಳತ್ತ ಲಕ್ಷ್ಯಕೊಡದೆ ತನ್ನಷ್ಟಕ್ಕೆ

ಬರೆದುಕೊಂಡರೆ, ಆಕೆಯ ಬರಹಕ್ಕೆ ದೊರೆಯುವ, ವಿಮರ್ಶೆ, ಅವಹೇಳನ, ಅಕ್ಷೇಪಣೆಗಳಿಗೆ ಒಳಗಾಗಬಲ್ಲುದು ಎಂಬುದಕ್ಕೆ ಇದು ಒಂದು ನಿದರ್ಶನ ನಿಜ, ಆದರೆ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆಮೂಲಾಗ್ರವಾಗಿ ಸ್ತ್ರೀ ಬರಹಗಳೆಲ್ಲವನ್ನೂ ಹೀಗೆಯೇ ನಾಶಮಾಡಲಾಗಿದೆ ಎಂದರೆ ತಪ್ಪಾಗುತ್ತದೆ. ಮಾಸ್ತಿಯವರೇ ಸ್ವತಃ ಸ್ತ್ರೀಯರ ಅನುಭವಗಳೂ ಸಾಹಿತ್ಯದೊಳಗೆ ಸಮಾವೇಶ-ಗೊಳ್ಳುವುದು ಅವಶ್ಯಕವೆಂದು 'ರಂಗವಲ್ಲಿ'ಎಂಬ ಮಹಿಳೆಯರ ಸಣ್ಣಕಥೆಗಳ ಸಂಗ್ರಹಕ್ಕೆ ಮುನ್ನುಡಿ ಬರೆದಿದ್ದಾರೆ. ಈ ಕಥಾಸಂಕಲನ 1937 ರಷ್ಟು ಹಿಂದೆಯೇ ಧಾರವಾಡದ ಮನೋಹರ ಗ್ರಂಥ ಭಂಡಾರದಿಂದ ಪ್ರಕಟವಾಗಿತ್ತು. ಕೊಡಗಿನ ಗೌರಮ್ಮ, ಬೆಳಗೆರೆ ಜಾನಕಮ್ಮ, ಶ್ಯಾಮಲಾ ದೇವಿ ಬೆಳಗಾಂವಕರ್, ಸರಸ್ವತೀಬಾಯಿ ರಾಜವಾಡೆ, ಸರಸ್ವತೀ ದೇವಿ ಗೌಡರ; ತಿರುಮಲೆ ರಾಜಮ್ಮ ಮುಂತಾದ ಹಲವಾರು ಸ್ವಾತಂತ್ರ್ಯಪೂರ್ವಕಾಲದ ಲೇಖಕಿಯರ ಬರಹಗಳ ಬಗ್ಗೆ ಅಂದಿನ ಮಹತ್ವದ ಲೇಖಕರಾದ ದ.ರಾ. ಬೇಂದ್ರೆ, ಸ.ಸ.ಮಾಳವಾಡ, ರಂ.ಶ್ರೀ ಮುಗಳಿ, ಬೀಚಿ, ಅ.ನ.ಕೃ ಮುಂತಾದ ಮಹನೀಯರೆಲ್ಲ ತುಂಬ ಗೌರವ, ಅಭಿಮಾನದಿಂದ ಮೆಚ್ಚುಗೆಯ ಮಾತುಗಳನ್ನು ಆಡಿದ್ದರು. ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರು ಎಂಬುದು ಮಹಿಳಾ ಸಾಹಿತ್ಯ ಪೂರ್ತಿ ನಿರ್ಲಕ್ಷಿತವಲ್ಲ ಈ ನಾಡಿನಲ್ಲಿ ಎಂಬ ಚರಿತ್ರೆಯ ಇನ್ನೊಂದು ಮುಖದ ಕಡೆಗೂ ಸೂಚನೆ ನೀಡುತ್ತದೆ.

ತಿರುಮಲಾಂಬಾ, ಕಲ್ಯಾಣಮ್ಮ ಬರೆಯತೊಡಗಿದ ಕಾಲಕ್ಕೆ ಮಹಿಳೆಯರು ಬರಯಬಲ್ಲರೆಂಬುದೇ ಹೊಸ ಸಂಗತಿಯಾಗಿತ್ತು. ಅದರಲ್ಲೂ ಸ್ತ್ರೀಯರಪರವಾದಹೂಡುತ್ತಾ ಸಮಾಜದಲ್ಲಿ ಮಹಿಳೆಯರಿಗೆ ಆಗಿರುವ ಅನ್ಯಾಗಳ ಬಗ್ಗೆ ಪ್ರತಿಭಟಿಸಿ, ಜನರನ್ನು ಎಚ್ಚರಿಸಬೇಕೆಂಬ ತಾತ್ವಿಕ ನಿಲುವಿನಿಂದ ಸ್ತ್ರೀಯರು ಬರೆಯಬಹುದೆಂಬುದು ಪಂಡಿತ ಲೋಕಕ್ಕೆ, ಸಂಪ್ರದಾಯಸ್ಥ ಸಮಾಜಕ್ಕೆ ಸುಲಭವಾಗಿ ಒಪ್ಪಬಲ್ಲ ಸಂಗತಿಯೂ ಆಗಿರಲಿಲ್ಲ. ಆದ್ದರಿಂದಲೇ ಒಳ್ಳೆಯ ಇಂಗ್ಲಿಷ್ ಶಿಕ್ಷಣದಿಂದ, ದೇಶೀಯ-ವಿದೇಶಿಯ, ಸಾಹಿತ್ಯ, ಸಂಸ್ಕೃತಿ, ಉತ್ತಮ ಲಕ್ಷಣಗಳ ಪರಿಚಯದಿಂದ ಸಂಪನ್ನರಾದ ನವೋದಯದ ಬರಹಗಾರರಿಗೆ ಈ ಲೇಖಕಿಯರ ಬರಹಗಳು ಕಳಪೆಯಾಗಿ ಕಂಡವು ಎಂದೆನಿಸುತ್ತದೆ. ಆದರೆ ತಮಗಿಂತ ಹಿಂದಿನ ಲೇಖಕರ ಭಾಷೆ, ಅಭಿವ್ಯಕ್ತಿ ತಂತ್ರ ಮೊದಲಾದವುಗಳನ್ನು ಬಳಸಿಕೊಂಡಿದ್ದ ಈ ಲೇಖಕಿಯರಿಗೆ ಅಂದಿನ ಪುರುಷ ಬರಹಗಾರರಿಗಿದ್ದ ಶೈಕ್ಷಣಿಕ ಸವಲತ್ತು, ಜೀವನಾನುಭವದ ಅನುಕೂಲಗಳೇನೂ ಇರಲಿಲ್ಲ ಎಂಬುದನ್ನು ಗಮನಿಸುವುದಕ್ಕೆ ಅಂದಿನ ಸಾಹಿತ್ಯಲೋಕದ ಪ್ರಜ್ಞೆಯೂ ವಿಸ್ತರಿಸಿರಲಿಲ್ಲ. ಅದರಾಚೆಗೆ ಸರಿದು ಎಲ್ಲಾ ಮಿತಿಗಳೊಳಗೂ ಇವರ ಬರಹದಲ್ಲಿ ಏನಾದರೂ ಸಮಾಜಕ್ಕೆ ಒಳ್ಳೆಯದಾಗಬಲ್ಲದ್ದು ಇದೆಯೆ ಎಂದು ನೋಡುವ ಯತ್ನ ಅಂದು ಅವಶ್ಯಕವೆಂದು ಕಂಡಿರಲಿಕ್ಕಿಲ್ಲ. ಆದ್ದರಿಂದ ಕಳಪೆಯಾದ್ದರಿಂದ ಕಳಪೆಯೇ ಎಂಬರೀತಿಯ 'ನಿಷ್ಪಕ್ಷ'ದ ವಿಮರ್ಶೆಗೆ ಅವರು ಬಲಿಯಾಗಬೇಕಾಯಿತು.

ಆದರೆ ನವೋದಯ ಸಾಹಿತ್ಯದ ಮನೋಧರ್ಮವನ್ನೇ ರೂಢಿಸಿ, ಅನುಸರಿಸಿ, ತಮ್ಮದನ್ನಾಗಿಸಿಕೊಂಡು ಲೇಖಕಿಯರು ಬರೆಯತೊಡಗಿದಾಗ, ಅವರನ್ನು ಸಾಹಿತ್ಯಲೋಕ ಕಡೆಗಣಿಸಲಿಲ್ಲ. ಆದ್ದರಿಂದ ಮೂವತ್ತರ ದಶಕದಲ್ಲಿ ರಂ. ಶ್ರೀ ಮುಗಳಿಯವರು ಬರೆದ 'ಕನ್ನಡ ಸಾಹಿತ್ಯ ಚರಿತ್ರೆ'ಯಲ್ಲಿ ಸಣ್ಣಕತೆಯ ಪ್ರಕಾರದಲ್ಲಿ ಗೌರಮ್ಮ, ಶ್ಯಾಮಲಾ ದೇವಿ, ದೇವಾಂಗನಾ, ಶಾಂತಾದೇವಿ, ಎಚ್.ವಿ.ಸಾವಿತ್ರಮ್ಮ, ಜಯಲಕ್ಷ್ಮೀ, ಗೀತಾದೇವಿ, ಸರಸ್ವತೀ ದೇವಿ, ರಾಜಲಕ್ಷ್ಮಿಯವರನ್ನು ಹೆಸರಿಸಿದ್ದು ಇವರೆಲ್ಲರೂ ಸಣ್ಣಕಥೆಯ ಸಾಹಿತ್ಯಕ್ಕೆ ' ಬೆಲೆಯುಳ್ಳ ಕಾಣಿಕೆಯಿನ್ನಿತ್ತಿದ್ದಾರೆಂದು' ಹೇಳಿದ್ದಾರೆ. ಮಾತ್ರವಲ್ಲ; ಕೊಡಗಿನಗೌರಮ್ಮ ನವರು "ಮೊದಲ ಗಿತ್ತಿ ಯಾಗಿ ಬರೆದ ಕತೆಗಳ ವಿವಿಧ, ಸನ್ನಿವೇಶಗಳಲ್ಲಿ ಹೆಣ್ಣಿನ ಹೃದಯದ ಪೃಥಕ್ಕಾರಣವು ಸರಳವೂ ಸೂಕ್ಷ್ಮವೂ ಆಗಿ ಬಂದಿದೆ. ಉದಾತ್ತ ಜೀವನ ದೃಷ್ಟಿ. ಅವರ ಬರವಣಿಗೆಯ ಸ್ಥಾಯಿಯಾಗಿದೆ. ಅವರ ಅಕಾಲ ನಿಧನದಿಂದ ಕನ್ನಡ ಸಾಹಿತ್ಯಕ್ಕೆ ಅಪಾರ ನಷ್ಟವಾಯಿತು. ಇದೇ ಮಾತನ್ನು ಶ್ಯಾಮಲಾದೇವಿ, ದೇವಾಂಗನಾ ಎನ್ನುವವರ ಬಗ್ಗೆಯೂ ಹೇಳಬಹುದು" ಎಂದಿದ್ದಾರೆ (ಪು246 ಒತ್ತು ನನ್ನದು). ಪುರುಷ ಬರಹಗಾರರ ಬಿಡಿ ಬರಹಗಳ ವಿಶ್ಲೇಷಣಾತ್ಮಕ ವಿವರಗಳಿಂದ ಉದಾಹರಿಸುವ ಮುಗಳಿಯವರು ಮಹಿಳಾ ಕತೆಗಾರರ ವಿಷಯದಲ್ಲಿ ಅದೇ ತತ್ವವನ್ನು ಅನುಸರಿಸದೆ 'ತಂತ್ರ ಜಾಲಕ್ಕಿಂತ ಹವಣಾದ ಸನ್ನಿವೇಶ ರಚನೆಯ ಮೂಲಕ' ಇವರೆಲ್ಲ 'ಸತ್ವಪೂರ್ಣವಾದ ಕತೆಗಳನ್ನು ರಚಿಸಿರುತ್ತಾರೆ' ಎಂಬ ಒಟ್ಟಾರೆ ತೀರ್ಮಾನ ಬರೆಯುತ್ತಾರೆ (ಒತ್ತು ನನ್ನದು).

ಆಧುನಿಕ ಕನ್ನಡ ಲೇಖಕಿಯರಲ್ಲಿ ತಮ್ಮ ಕಾಲದವರಿಂದ ಮಾತ್ರವಲ್ಲದೆ ಮುಂದಿನ ಬೇರೆ ಬೇರೆ ದಶಕಗಳ ಬರಹಗಾರರಿಂದಲೂ ನಿರ್ಲಕ್ಷಿಸಲು ಸಾಧ್ಯವೇ ಇಲ್ಲದಷ್ಟು ಗಮನಸೆಳೆದ ಏಕೈಕ ಲೇಖಕಿ ಎಂದರೆ ತ್ರಿವೇಣಿಯವರು. ಅವರ ಬರಹಗಳ ಹೊಸತನ ಒಂದು ರೀತಿಯ ಬಂಡಾಯಭಾವ, ಭಾವೋದ್ರೇಕಕಾರಿ ಶೈಲಿ, ಕನಸುಗಾರಿಕೆಗಳಲ್ಲಿ ತ್ರಿವೇಣಿಯುವರ ಜನಪ್ರಿಯತೆಯ ಗುಟ್ಟು ಅಡಗಿದೆ. ಆದರೆ ಧನಾತ್ಮಕವಾಗಿ ಅಲ್ಲದಿದ್ದರೆ ನೇತ್ಯಾತ್ಮಕವಾಗಿಯಾದರೂ ಅವರು ಮುಂದಿನವರ ವಿಮರ್ಶೆಗೆ ಪಾತ್ರರಾಗಿ, ಸಾಹಿತ್ಯ ಚರಿತ್ರೆಯಲ್ಲಂತೂ ಒಂದು ಸ್ಥಾನವನ್ನು ತಮಗಾಗಿ ನಿರ್ಮಿಸಿಕೊಂಡರೆನ್ನಬಹುದುದಾಗಿದೆ. ಮುಗಳಿ, ಶೇಷಗಿರಿರಾಯರಂಥ ಸಾಹಿತ್ಯದ ನಿಷ್ಠಾವಂತ ವಿಮರ್ಶಕರು, ಚರಿತ್ರೆಕಾರರಷ್ಟೇ ಅಲ್ಲದೆ,, ಲಂಕೇಶ, ಗಿರಡ್ಡಿ ಗೋವಿಂದರಾಜ್‌ರಂತಹ ನವ್ಯವಿಮರ್ಶಕರೂ, ಕೆ. ಸತ್ಯನಾರಾಯಣರಂಥ ಹಲವು ನವ್ಯೋತ್ತರ ಲೇಖಕರೂ ತ್ರಿವೇಣಿಯನ್ನು ಮಹಿಳಾ ಬರಹ ಕುರಿತ ತಮ್ಮ ಒಂದೊಂದು ದೃಷ್ಟಿಗೆ ಪರಾಮರ್ಶಕ ಬಿಂದುವನ್ನಾಗಿಸಿ ಕೊಂಡಿದ್ದಾರೆ.

ತ್ರಿವೇಣಿಯ ಬರುವಿಕೆಯಿಂದ ಕನ್ನಡ ಸಾಹಿತ್ಯದಲ್ಲಿ ಅನೇಕ ಹೊಸ ಅಂಶಗಳು ಪ್ರವೇಶ ಪಡೆದವೆಂದು ಮುಗಳಿಯವರು ಅಲಂಕಾರಿಕ ಶೈಲಿಯಲ್ಲಿ ದಾಖಲಿಸಿರುವುದು ಇಂದಿಗೂ ಕುತೂಹಲಕರ - ವೆನಿಸುವಂತಿದೆ. "ಈ ವರೆಗೆ ಅವರು ಬರೆದಿರುವ ಏಳೆಂಟು ಕಾದಂಬರಿಗಳಲ್ಲಿ ಅಚ್ಚ ಹೊಸದಾರಿಯಲ್ಲಿ 'ಮೊದಲ ಹೆಜ್ಜೆ' ಇದೆ, ಹೊಸ 'ಅಪಸ್ವರ' ಗಳೂ 'ಅಪಜಯ'ಗಳೂ ಇರುತ್ತವೆ. ಈ ವರೆಗೆ ಕನ್ನಡಕ್ಕೆ 'ಮುಚ್ಚಿದ ಬಾಗಿಲು' ತೆರೆದಿದೆ. ಜೇಲು ಆಸ್ಪತ್ರೆ, ಅದರಲ್ಲೂ ಹುಚ್ಚರಾಸ್ಪತ್ರೆ, ಸಹ ಇವುಗಳಲ್ಲಿಯ ಜೀವನ ಕ್ರಮ ಕಲಾಕೃತಿಯ ರೂಪ ತಾಳಿದೆ" (ಒತ್ತು ನನ್ನದು) ಎಂದು ಹೇಳಿ ಮುಗಳಿಯವರು ತ್ರಿವೇಣಿಯವರ 'ಬೆಕ್ಕಿನಕಣ್ಣು'

ಕಾದಂಬರಿ ಕನ್ನಡ ಕಾದಂಬರೀ ಪ್ರಪಂಚಕ್ಕೆ ವಿನೂತನ ಕಾಣಿಕೆ ಎಂದು ಮೆಚ್ಚಿ ಬರೆದಿದ್ದಾರೆ. (ಪು.253, 58).

ತ್ರಿವೇಣಿ ಬರಹ ಬಂದ ಹೊಸತರಲ್ಲಿ ಹುಟ್ಟಿಸಿದ ಈ ಸಹೃದಯ ವಿಮರ್ಶೆ ಮುಂದೆ ಉಳಿಯಲಿಲ್ಲ. ನವ್ಯ ವಿಮರ್ಶೆಯ ದಾಳಿಗೆ ಅವರ ಕೃತಿಗಳು ಒಳಗಾಗಿವೆ. ನವ್ಯ ವಿಮರ್ಶಕರಿಗೆ ತ್ರಿವೇಣಿ ಬರಹದಲ್ಲಿ ಹೆಣ್ಣಿನ ಎಲ್ಲಾ ಅನ್ಯಾಯಗಳಿಗೂ ಗಂಡಸರನ್ನೇ ಹೊಣೆಮಾಡಿ ಆಕ್ರೋಶಿಸುವ ಏಕಪಕ್ಷೀಯ ನೋಟವಿದೆಯೆಂದು ಲಂಕೇಶರು ಆಕ್ಷೇಪಿಸಿದ್ದರೆ, ತ್ರಿವೇಣಿಯನ್ನೆ ಅನುಸರಿಸಿ ಬರೆಯತೊಡಗಿದ ಅನುಪಮಾ ನಿರಂಜನರಂಥ ಕಾದಂಬರಿಕಾರ್ತಿಯರ ಅನೇಕರಲ್ಲಿ ಹೇಗೆ 'ಅವೈಚಾರಿಕತೆ' ಬರಹದಲ್ಲಿ ಹಾಸುಹೊಕ್ಕಾಗಿರುತ್ತದೆಂದು, ಸಂಪ್ರದಾಯ ಬದ್ಧತೆಯಿಂದಾಗಿ ಅವರ ಕಾದಂಬರಿಗಳು ಸಮಸ್ಯೆಗಳಿಗೆ ಸುಲಭ ಪರಿಹಾರ, ಪಲಾಯನಗಳಲ್ಲಿ ತೊಡಗುತ್ತವೆಯೆಂದು ಗಿರಡ್ಡಿ, ವೀಣಾ ಶಾಂತೇಶ್ವರ, ಜಿ. ಸರ್ವಮಂಗಳಾ ಮುಂತಾದ ನವ್ಯ ವಿಮರ್ಶಕರು ಆಕ್ಷೇಪವೆತ್ತಿದ್ದಾರೆ. ಮನೋವಿಜ್ಞಾನದ ಅರಿವಿನಿಂದ ಕೇಸ್ ಹಿಸ್ಟರಿಗಳನ್ನು ಸೃಷ್ಟಿಸುವ ತ್ರಿವೇಣಿ ಸ್ತ್ರೀ ಪರ ವಾದಹೂಡಿ ವರದಕ್ಷಿಣೆ, ವೇಶ್ಯಾವಾಟಿಕೆ, ವಿಧವಾ ವಿವಾಹಾದಿ ಹಲವು ಸಮಸ್ಯೆಗಳನ್ನು ಎತ್ತಿಕೊಂಡರೂ ಅಂತಿಮವಾಗಿ ಕುಟುಂಬ, ಮದುವೆಗಳ ಸಾಂಪ್ರದಾಯಿಕ ಚೌಕಟ್ಟಿನೊಳಗೇ ಮಹಿಳೆಯ ಬದುಕಿನ ಗತಿಯಿದೆಯೆಂದು ನಂಬುವವರೆನ್ನಬಹುದು ಎಂದು ಮುಂದೆ ಅನೇಕ ವಿಮರ್ಶಕರು ಮತ್ತೆ ಮತ್ತೆ ಹೇಳಿರುವ ವಿಚಾರವಾಗಿದೆ. ಆದರೆ ಎಂಬತ್ತರ ದಶಕದಲ್ಲಿ ಸ್ತ್ರೀವಾದಿ ವಿಮರ್ಶೆಯ ದೃಷ್ಟಿಕೋನ ಬೆಳೆಯತೊಡಗಿದಾಗ, ಬೆಂಗಳೂರಿನ ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ ತ್ರಿವೇಣಿ ಬರಹ ಕುರಿತು ಮೊದಲಬಾರಿಗೆ ಒಂದು ಸ್ವತಂತ್ರ ವಿಚಾರ ಸಂಕಿರ್ಣ ನಡೆಸಿತು. ಅದರಲ್ಲಿ ವಿಜಯಾದಬ್ಬೆ, ನೇಮಿಚಂದ್ರ ಮೊದಲಾಗಿ ಹಲವಾರು ವಿಮರ್ಶಕ-ಲೇಖಕಿಯರು ತ್ರಿವೇಣಿಯವರ ಬರಹಗಳ ಒಳಹೊಕ್ಕು ಸಾವಧಾನವಾಗಿ ಮಹಿಳೆಯರ ಅನುಭವಗಳಲ್ಲಿ ಎದುರಾಗುವ ಸತ್ಯಗಳನ್ನು ತೆರೆದು ತೋರಿಸಲೆತ್ನಿಸಿದರು. ಆದ್ದರಿಂದಲೇ ಲೇಖಕಿ ಸ. ಉಷಾ ಒಂದು ಕಡೆ ಹೇಳಿರುವಂತೆ ತ್ರಿವೇಣಿಯಂಥ ಲೇಖಕಿಗೆ ನಿಜವಾಗಿ ಗಂಭೀರ ವಿಮರ್ಶೆಯನ್ನು ಕೊಟ್ಟು ಸಾಹಿತ್ಯ ಚರಿತ್ರೆಯಲ್ಲಿ ಮಾನ್ಯತೆ ದೊರಕಬೇಕಾದರೆ ಅದಕ್ಕೆ ವಿಜಯಾ ದಬ್ಬೆಯಂಥ ಮತ್ತೊಬ್ಬ ಮಹಿಳೆ ಹುಟ್ಟಿಬರಬೇಕಾಯಿತು ಎಂಬ ಮಾತು ತುಂಬ ಅರ್ಥವತ್ತಾದದ್ದು. ಸಾಹಿತ್ಯ ಚರಿತ್ರೆ ಹಾಗೂ ವಿಮರ್ಶಾಲೋಕ ಕನ್ನಡದಲ್ಲಿ ಮಹಿಳೆಯರ ಬರಹಗಳನ್ನು ಕಣ್ಣು ಬಿಟ್ಟು ನೋಡಲು ಸಾಧ್ಯವಾಗಿದ್ದರೆ ಅದಕ್ಕೆ ಮಹಿಳಾ ಬರಹಗಾರರು, ಸ್ತ್ರೀವಾದಿ ವಿಮರ್ಶಕರೂ ಮಾಡಿದಂಥ ತುಂಬುನಿಷ್ಠೆಯ ಸಂಶೋಧನಾ ಯತ್ನಗಳೇ ಮುಖ್ಯಕಾರಣ ಎಂಬುದು ಇದರಿಂದ ಸ್ಪಷ್ಟವಾಗಬಲ್ಲದು.

ಸಂಸ್ಕೃತಿ ಕಟ್ಟೋದಕ್ಕೆ ಮಹಿಳೆಯ ಕೊಡುಗೆ ?

ಕಳೆದ ಎರಡು ದಶಕದಿಂದೀಚೆಗೆ 'ಸಂಸ್ಕೃತಿ ವಿಮರ್ಶೆ' ಎಂಬ ವಿಶಿಷ್ಟ ವಿಚಾರಪಂಥ ಬೆಳೆದಿದ್ದು ಅದು ಇದುವರೆಗಿದ್ದ ಸಾಹಿತ್ಯ ಚರಿತ್ರೆಯ ದೃಷ್ಟಿ, ಸ್ವರೂಪಗಳನ್ನೆ ಪ್ರಶ್ನೆಗೆ ಒಳಗುಮಾಡುತ್ತಿದೆ. ಸಾಹಿತ್ಯ ಚರಿತ್ರೆ ಎಂಬುದು ಗೊತ್ತಾದ ಸಾಹಿತ್ಯ ಕಲ್ಪನೆಗಳ, ವಿಮರ್ಶಾ ಮಾನದಂಡಗಳ ಚೌಕಟ್ಟುಗಳೊಳಗೆ ಸಾಹಿತ್ಯ ಪಠ್ಯಗಳನ್ನು ಕೂರಿಸುವ ಕೆಲಸವಲ್ಲ ; ನಮ್ಮ ಅಥವಾ ಯಾವುದೇ ಸಂಸ್ಕೃತಿಯೊಳಗೆ ಕೆಲವೇ ದೃಷ್ಟಿಗಳು ಮಾನ್ಯವೆನಿಸಿಬಿಟ್ಟು, ಬಹುಸಂಖ್ಯಾತ ಇತರ ದೃಷ್ಟಿ ಕೋನಗಳೆಲ್ಲ ಗೌಣವೆಂದು ಒತ್ತರಿಸಲ್ಪಟ್ಟಿರುತ್ತವೆ. ಆದರೆ ಒಂದು ಸಂಸ್ಕೃತಿಯೊಳಗೆ ಹೀಗೆ ಪ್ರಧಾನ ಮತ್ತು ಗೌಣ-ನೆಲೆಗಳೆರಡೂ ಕ್ರಿಯಾಶೀಲವಾಗಿ ಭಾಗವಹಿಸುತ್ತಿರುವಾಗ ಚರಿತ್ರೆಯನ್ನು ಹುಡುಕುವವರು ಇವೆಲ್ಲವನ್ನು ಒಂದರ ಪಕ್ಕ ಮತ್ತೊಂದನ್ನು ತಂದು ನಿಲ್ಲಿಸಿ, ಹೇಗೆ ಒಂದರ ಅತಿರೇಕಗಳನ್ನು ಮತ್ತೊಂದು ನಿಯಂತ್ರಿಸುತ್ತಿರುತ್ತದೆ ಎಂಬುದನ್ನು ತೋರಿಸಿಕೊಡಬೇಕಾಗುತ್ತದೆ. ಒಂದು ಸಂಸ್ಕೃತಿಕ ದೃಷ್ಟಿಕೋನದ ಜೊತೆ ಮತ್ತೊಂದು - ವಿರೋಧ, ಸಾಹಚರ್ಯ, ಸಹಕಾರ ಇಲ್ಲವೆ ಬಂಡಾಯದ ವಿವಿಧ ಜಾಗಗಳಿಂದ ಹೇಗೆ ವಿಭಿನ್ನ ಸಂಬಂಧಗಳನ್ನು ಪಡೆಯುತ್ತಿರುತ್ತದೆ ಎಂದು ಪ್ರಕಾಶಕ್ಕೆ ತರುವ ಹೊಣೆ ವಿಮರ್ಶೆ ಮತ್ತು ಚರಿತ್ರೆಗಳದಾಗುತ್ತದೆ ಎನ್ನುವುದು ಇಂದಿನ ದೃಷ್ಟಿ.

ಹೀಗೆ ಒಂದರೊಂದಿಗೆ ಇನ್ನೊಂದನ್ನು ಎತ್ತಿಕಟ್ಟಿ ನೋಡುವ ಮೂಲಕ ಹೊಸ ಸತ್ಯವೊಂದನ್ನು ಅನಾವರಣಗೊಳಿಸಬಹುದೆಂಬುದು ಈ ಸಂಸ್ಕೃತಿ ವಿಮರ್ಶೆಯ ಒಂದು ತಾತ್ವಿಕ ನಂಬಿಕೆ. ಆದ್ದರಿಂದ ಇಂದಿನ ಚರಿತ್ರಾಕಾರರಿಗೆ, ಮುಖ್ಯ ಸಾಹಿತ್ಯ ವಾಹಿನಿಯ ಹಾಗೆಯೆ, ಅದರ ಅಂಚಿನಲ್ಲಿ ಸೃಷ್ಟಿಯಾಗುವ ಬರಹಗಳೂ ಮುಖ್ಯವಾಗುತ್ತವೆ. ಈ ಕಾರಣದಿಂದಲೇ ಪ್ರಧಾನ ಸಾಹಿತ್ಯದೃಷ್ಟಿಯಿಂದ ದೀರ್ಘಕಾಲದಿಂದ ನಿರ್ಲಕ್ಷ್ಯಕ್ಕೆ ಒಳಗಾದ ಮಹಿಳಾ, ದಲಿತ, ಮುಸ್ಲಿಂ ಅಥವಾ ಬುಡಕಟ್ಟು ನೆಲೆಗಳಿಂದ ಹುಟ್ಟಿದ ಮೌಖಿಕ ಅಥವಾ ಲಿಖಿತ ಸಾಹಿತ್ಯ ಮಾದರಿಗಳೆಲ್ಲವೂ ಬೇರೆ ಬೇರೆ ಅಂತಃಸತ್ವದ ಲಕ್ಷಣಗಳನ್ನು ಮುಖ್ಯವಾಹಿನಿಗೆ ತಂದು ಸೇರಿಸುವ ಬಗೆಯು ತುಂಬ ಕುತೂಹಲಕರ ಶೋಧನೀಯ ಸಂಗತಿಯಾಗಿ ತೋರುತ್ತದೆ.

ಪ್ರಧಾನ ಸಂಸ್ಕೃತಿ ತಾನು ದಕ್ಕಿಸಿಕೊಂಡ ಅಧಿಕಾರ ಯಜಮಾನಿಕೆಗಳಿಂದ ಕೊಬ್ಬಿ, ರೂಕ್ಷವೂ ಅಮಾನವೀಯವೂ ಆದ ರೀತಿ ಬೆಳೆಯತೊಡಗಿದಾಗಲೆಲ್ಲ ಕೆಳಗಿನ ಸಂಸ್ಕೃತಿಗಳು ಅಂಥ ಅತಿರೇಕಗಳಿಗೆ ತಡೆಯೊಡ್ಡಿ ಮಾನವೀಯತೆಯನ್ನು ಉಳಿಸಿಡಲು ಹೇಗೆ ಕ್ರಿಯಾಸನ್ನದ್ಧವಾಗಿರುತ್ತವೆ, ಆಗಿರಬಲ್ಲವು ಎಂಬುದನ್ನು ಇಂದಿನ ಚರಿತ್ರೆ, ವಿಮರ್ಶೆ ಕುತೂಹಲದಿಂದ ಗಮನಿಸುತ್ತದೆ. ಕನ್ನಡದ ಇಂದಿನ ಮಹಿಳಾ ಸಾಹಿತ್ಯ, ಸ್ತ್ರೀವಾದಿ ವಿಮರ್ಶೆಗಳೆರಡನ್ನೂ ಕುರಿತು ಹಲವಾರು ಸಾಂಪ್ರದಾಯಿಕ ಚರಿತ್ರೆಯ ಮಾದರಿಯಲ್ಲೇ ಇಂದಿಗೂ ಕೇವಲ ಹೆಸರು ಪಟ್ಟಿಗಳ ದಾಖಲೆ ಅಥವಾ ಕಣ್ಣೊರೆಸುವ ಬೆನ್ನು ತಟ್ಟುವ ರೀತಿಯ ಪ್ರಸ್ತಾಪಗಳಷ್ಟನ್ನೇ ಮಾಡಿ ದೊಡ್ಡಹೊರೆ-ಯನ್ನು ನಿರ್ವಹಿಸಿದ ರೀತಿ ತೃಪ್ತಿ ಪಟ್ಟುಕೊಳ್ಳುವುದಿದೆ. ಆದರೆ ಇಂತಹ ಪಟ್ಟಿಗಳ ತಯಾರಿಕೆಗಿಂತ ಇಂದು ಮುಖ್ಯವಾಗಿ ಮಹಿಳಾ ಸಾಹಿತ್ಯಾನುಭವವನ್ನು ಮುಖ್ಯ ಚರಿತ್ರೆಗೆ ತಂದು ಸಮಾವೇಶಗೊಳಿಸಲು ತೀರಾ ಭಿನ್ನವಾದ ರೀತಿಯ ಯತ್ನಗಳೇ ನಡೆಯಬೇಕಾಗಿದೆ.

ಉದಾಹರಣೆಗೆ, ಗಂಡಿನ ದೃಷ್ಟಿಯಿಂದಲೇ ಈ ವರೆಗೆ ರಚಿತವಾಗಿ ಒಪ್ಪಿತವಾಗಿರುವ ಯಾವೆಲ್ಲಾ ಬದುಕಿನ ಅಂಶಗಳು ಔಟುಂಬಿಕ, ಅಡುಗೆ ಮನೆಯ ಅಥವಾ ಆರತಕ್ಷತೆಯ ಲೋಕದ್ದೆಂದು ತಿರಸ್ಕೃತವಾಗಿದೆಯೋ, ಅಪಮೌಲ್ಯಕ್ಕೆ ಒಳಗಾಗಿದೆಯೋ ಅವುಗಳನ್ನು ಎತ್ತಿ ಹಿಡಿದು ಸ್ಥಾಪಿತವೂ ಒಪ್ಪಿತವೂ ಆದ ಬದುಕಿನ ಅಂಶಗಳನ್ನೆ ಮತ್ತೆ ಮೌಲ್ಯ ಮಾಪನ ಮಾಡುವಷ್ಟು ಸಬಲವಾಗಿ

ದಾಖಲಿಸುವುದು ಒಂದು ಇಂತಹ ಯತ್ನವೆನ್ನಬಹುದು. ತಿರುಮಲಾಂಬಾ, ತ್ರಿವೇಣಿ ಬಿಟ್ಟರೆ, ಬಹುವಾಗಿ ಚರ್ಚಿತರಾಗಿ, ಬಹುವಾಗಿ ವಿಮರ್ಶಿತರಾಗಿರುವ ಇಂದಿನ ಮತ್ತೊಬ್ಬ ಲೇಖಕಿ ಎಂದರೆ ವೈದೇಹಿ. ಆವರ ಬರಹಗಳೇ ಪ್ರತ್ಯೇಕ ಆಧ್ಯಯನ, ಪ್ರತ್ಯೇಕ ವಿಮರ್ಶೆಯ ಗೌರವ ವಿಪುಲವಾದ ಪ್ರಶಸ್ತಿ, ಸನ್ಮಾನಗಳನ್ನು ಪಡೆದಿವೆ ಎಂಬುದು ನಿಜವಾದರೂ ನಿಜವಾಗಿ ಒಬ್ಬ ಲೇಖಕಿಗೆ ದೊರೆಯಬಹುದಾದ ಸಮಗ್ರ ವಿಮರ್ಶೆಯ ಅತ್ಯುನ್ನತಗೌರವ ಅವರಿಗಾದರೂ ಸಂದಿದೆಯೇ ಎಂಬುದು ಅನುಮಾನಾಸ್ಪದವೇ.

ಏಕೆಂದರೆ ಅವರ ಬರಹಗಳ ದಿಟ್ಟವಾದ ಪ್ರಾದೇಶಿಕ ಲಕ್ಷಣ, ಅವರು ಚಿತ್ರಿಸುವ ಬದ್ಧ ಸಂಸ್ಕೃತಿಯ ಜಗತ್ತು, ಬದಲಾಗದ ಜೀವನ ಕ್ರಮ, ಬದಲಾಗದ ಅಡುಭಾಷೆಯ ಸೊಗಡಿನ ಒಳಗಿಂದ ಹುಟ್ಟಿಕೊಳ್ಳುವ ಪಾತ್ರವರ್ಗ ಬರೀ ಹೆಣ್ಣುಗಳದಲ್ಲ ; ಆವರು ಆಡುವುದು ಬರೀ ಹೆಣ್ಣುಮಕ್ಕಳ ಬದುಕಿನ ಬಗ್ಗೆಯಲ್ಲ. ಅವರು ಹೆಣ್ಣುಗಳಿರಲಿ, ಗಂಡುಗಳೇ ಇರಲಿ, ಅವರು ಆಡುವುದು ಎಲ್ಲಾ ಮನುಷ್ಯರ ಒಳ-ಹೊರಗಿನ ಸಂಕೀರ್ಣ ಭಾವ ವಿಸ್ತಾರಗಳ ಸಂಕೀರ್ಣ ಭಾಷೆಯನ್ನು ಆ ಪಾತ್ರಗಳಿಂದ ಲೇಖಕಿ ಬೆಳಕು ಬೀರಲು ಯತ್ನಿಸುವುದು ಎಲ್ಲಾ ಮನುಷ್ಯರ ಸಣ್ಣ, ದೊಡ್ಡ, ಒಳ್ಳೆಯ, ಕೆಟ್ಟತನಗಳ ದೊಡ್ಡ ಅಂತರಂಗದ ವಿನ್ಯಾಸದ ಮೇಲೆ-ಎಂಬ ಅಂಶಮಾತ್ರ ಈ ವರೆಗೆ ಯಾರ ಗಮನಕ್ಕೂ ಬಂದದ್ದಿಲ್ಲ. ವೈದೇಹಿ ಒಂದು ಉದಾಹರಣೆಯಷ್ಟೆ, ಅವರಂತೆಯೇ ಇಂದು ಹಲವಾರು ಲೇಖಕಿಯರು ಪಿತೃಸಂಸ್ಕೃತಿಯ ಅನಾವರಣದ ಅಳಲಿನ ಸ್ಥಿತಿಯಿಂದ ಎಷ್ಟೋ ಮುಂದೆ ಸಾಗಿಸಿದ್ದಾರೆ. ಅಂಥವರು ಎಲ್ಲಾ ಮನುಷ್ಯರನ್ನು ಸಂಬೋಧಿಸಿಮಾತನಾಡಲೆತ್ನಿಸುತ್ತಿದ್ದಾರೆ. ಅಂದರೆ ಪುರುಷ ಪಾತ್ರಗಳು ಮತ್ತು ಸ್ತ್ರೀಪಾತ್ರಗಳ ಮೂಲಕ ಕೂಡ ಅವರು ಒಟ್ಟಾರೆ 'ಮಾನವ'ತೆಯ ಸತ್ಯವನ್ನು ಶೋಧಿಸಲು ಹೊರಟಿದ್ದಾರೆ ಎಂಬ ಅಂಶಮಾತ್ರ ಸಾಹಿತ್ಯಲೋಕದಲ್ಲಿ ಇನ್ನೂ ಮಾನ್ಯತೆ ಪಡೆದೇ ಇಲ್ಲ.

ಎಲ್ಲಿಯವರೆಗೆ ಹೀಗೆ ಸ್ತ್ರೀಕೂಡ ಮನುಷ್ಯರ ವ್ಯಕ್ತಿತ್ವದೊಳಹೊಕ್ಕು ಬರೆಯಬಲ್ಲಳೆನ್ನುವುದು, ಹಾಗೆ ಬರೆದದ್ದು ಪುರುಷರಿಗೂ ಒಂದು ಆಂತರಿಕ ತಿಳುವಳಿಕೆಯನ್ನು ಗಳಿಸಿಕೊಡಬಲ್ಲದು, ಅದು ದ್ವೇಷ ಇಲ್ಲವೆ ತಿರಸ್ಕಾರದ ಆಚೆಗೆ ಬೇರೇನನ್ನೋ ಪುರುಷಲೋಕಕ್ಕೆ ಸೂಚಿಸುತ್ತಿದೆ ಎಂಬುದನ್ನು ನಮ್ಮ ವಿಮರ್ಶೆಯಾಗಲಿ, ಚರಿತ್ರೆಯಾಗಲಿ ಸ್ವೀಕರಿಸಲು/ ಒಪ್ಪಲು ನಿರಾಕರಿಸುತ್ತಲೇ ಇರುತ್ತದೆಯೋ ಅಲ್ಲಿಯವರೆಗೂ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಿಳಾ ಸಾಹಿತ್ಯ ಎಂಬುದು ಒಂದು ಔಪಚಾರಿಕ ಅನುಬಂಧವಷ್ಟೇ ಆಗಿ ಉಳಿದಿರುತ್ತದೆಯೇ ಹೊರತು ಚರಿತ್ರೆಯನ್ನು ಸಂರಚಿಸಬಲ್ಲ ಹೊಸ ಶಕ್ತಿ ಯಾಗಿ ಅದು ಬೆಳೆಯಲಾರದು. ಅಸ್ಸಾಮಿನಲ್ಲೋ, ಮಹಾರಾಷ್ಟ್ರದಲ್ಲೋ, ಬಂಗಾಳದಲ್ಲೋ ಮಹಿಳೆಯರ ಬರಹದಿಂದ ತಾವೂ ಕಲಿಯಬಹುದಾದ್ದು ಇದೆ ಎಂದು ಭಾವಿಸಬಲ್ಲ ವಿಮರ್ಶಕರು, ಪುರುಷ ಬರಹಗಾರರೂ ಕಂಡುಬರುತ್ತಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಇದೇಕೆ ಸಾಧ್ಯವಾಗಿಲ್ಲ ಎಂಬುದು ಇಂದು ತುಂಬ ವಿಚಾರಾರ್ಹವಾದ ಸಾಂಸ್ಕೃತಿಕ ಕೊರತೆಯಾಗಿಲ್ಲವೇ? ಅಸ್ಸಾಮಲ್ಲಿ ನಿರ್ಮಲಾ ಬೊರ್‌ದೊಲೈ ಯಂಥ ಕವಯತ್ರಿ ಬರೆದ ಹಾಡುಗಳನ್ನು ಸಾಹಿತ್ಯ ಸಭೆ, ಸಮಾವೇಶಗಳಲ್ಲಿ ಪುರುಷರೂ ಉದಾಹರಿಸಬಲ್ಲರು, ಸಮೂಹಗೀತೆಯಾಗಿ ಹಾಡಬಲ್ಲರು, ಅಲ್ಲಿ ಇಂದಿರಾ ಗೋಸ್ವಾಮಿ ಕಾದಂಬರಿ ಬರೆದರೆ ತಮಗೆ ಆದರಿಂದ ಏನು ಹೊಸ ಜೀವನ ದರ್ಶನ ದೊರೆತೀತು ಎಂದು ಪುರುಷ ವಿಮರ್ಶಕರು ಕಾತರದಿಂದ ನಿರೀಕ್ಷಿಸಬಲ್ಲರು. ಆದರೆ ದ್ರಾವಿಡ ಸಂಸ್ಕೃತಿ, ಮಾತೃ ಸಂಸ್ಕೃತಿಗಳ ಬಗ್ಗೆ ಬಹಳ ಹೆಮ್ಮೆಪಟ್ಟುಕೊಳ್ಳುವ ಕನ್ನಡ ಸಾಹಿತ್ಯದ ಜಗತ್ತಿನಲ್ಲಿ ಮಾತ್ರ ಹೀಗೆ ಸ್ತ್ರೀ ಬರಹಕ್ಕೆ ಅಭಿಮುಖವಾಗಲು ಧೈರ್ಯವೇ ಕಾಣದಂಥ ಸ್ಥಿತಿ ಏಕೆ ಇಂದಿಗೂ ಉಳಿದಿದ್ದಾವೆ? ಎಂಬುದು ಸಂಸ್ಕೃತಿ ಚಿಂತಕರು ವಿಚಾರಿಸಬೇಕು, ಇದಕ್ಕೆ ಯಾವ ಮೀಸಲಾತಿ ಅಥವಾ ಸಹಾನುಭೂತಿಯ ಅಗತ್ಯವಿಲ್ಲ. ಯಾವ ಹಕ್ಕೊತ್ತಾಯದ ಚಳುವಳಿಯೂ ಇದನ್ನು ಒದಗಿಸಲಾರದು. ಕೇವಲ ಈ ನಾಡಿನ ಸಂಸ್ಕೃತಿಯ ಒಳಗಣ್ಣು ತೆರೆಯಬೇಕಷ್ಟೆ.

ತಾಂತ್ರಿಕ ಶಿಕ್ಷಣ ವಿದ್ಯಾರ್ಥಿನಿ / ವಿದ್ಯಾರ್ಥಿಗಳೊಂದಿಗೆ ಒಂದು ಸಂವಾದ

ಕುಶಾಲನಗರ

ನಾಲ್ಕು ದಶಕಗಳ ಹಿಂದೆ ನಿರ್ಮಿತವಾದ ಕಟ್ಟಡವಿರುವ ಈ ತಾಂತ್ರಿಕ ಶಿಕ್ಷಣ ಕಾಲೇಜಿನಲ್ಲಿ ಮಹಿಳಾ ವಿದ್ಯಾರ್ಥಿಗಳಿಗೆಂದೇ ನಿರ್ಮಿತವಾದ ಮಹಿಳಾ ಸಿಬ್ಬಂದಿಗಳು ಪುರುಷ ಸಿಬ್ಬಂದಿಗಳು ಜತೆಜತೆಯಲ್ಲಿ ಉಪಯೋಗಿಸುವ ಪರಿಸ್ಥಿತಿ ಇದೆ. 1982ರಲ್ಲಿ ಕೇವಲ ಇಬ್ಬರು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಈಗ ಸಂಸ್ಥೆಯ ಒಟ್ಟು ಐದುನೂರು ವಿದ್ಯಾರ್ಥಿಗಳಲ್ಲಿ ಕನಿಷ್ಠ ನೂರ ಇಪ್ಪತ್ತು ವಿದ್ಯಾರ್ಥಿನಿಯರು ಅಭ್ಯಾಸ ಮಾಡುತ್ತಿದ್ದರೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ಹಾಸ್ಟಲ್ ಸೌಲಭ್ಯ ಇಲ್ಲದೆ ಇರುವುದರಿಂದ ದೂರದೂರಿನಿಂದ ಇಲ್ಲಿಗೆ ಬರುವ ವಿದ್ಯಾರ್ಥಿನಿಯರು ಬೆಂಕಿಪೊಟ್ಟಣದಂತಿರುವ ಸಣ್ಣ ರೂಮುಗಳಲ್ಲಿ ಅಡಿಗೆ ಮಾಡಿಕೊಂಡುವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಇಂತಹ ವಿದ್ಯಾರ್ಥಿನಿಯರಿಗೆ ಭದ್ರವಾಗಿರುವ ಸ್ನಾನದ ಕೋಣೆ, ಶೌಚಾಲಯ ವ್ಯವಸ್ಥೆಗಳನ್ನು ರೂಮುಗಳ ಮಾಲೀಕರು ಕಟ್ಟಿಸಿಲ್ಲ. ಕಳೆದೆರೆಡು ವರ್ಷಗಳಿಂದ ವರ್ಷಕ್ಕೊಂದು ವಿದ್ಯಾರ್ಥಿನಿಯಾದರೂ ವಿಷ ಸೇವಿಸಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದಾಳೆ....

ಬರೀ ಪುರುಷರಿಗೆಂದೇ ಸೀಮಿತವಾದ ತಾಂತ್ರಿಕ ಶಿಕ್ಷಣದಲ್ಲಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗೊಳ್ಳುತ್ತಿರುವುದರಿಂದ ಇಡೀ ತಾಂತ್ರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಇಂತಹ ತಾರತಮ್ಯ ಸಹಜವಾಗಿಯೇ ಆಗುತ್ತಿದೆ ಎನ್ನುವುದಕ್ಕಿಂತ ಬದಲಾದ ಸಾಮಾಜಿಕ ಸನ್ನಿವೇಶಗಳಲ್ಲಿ ಹೆಚ್ಚಿನ ಮಹಿಳೆಯರು ತಾಂತ್ರಿಕ ಶಿಕ್ಷಣ ಕ್ಷೇತ್ರಕ್ಕೆ ಭಾರೀ ಸಂಖ್ಯೆಯಲ್ಲಿ ಪ್ರವೇಶಿಸುವದನ್ನು ಪುರುಷ ಕೇಂದ್ರಿತ ತಾಂತ್ರಿಕ ಶಿಕ್ಷಣ ವ್ಯವಸ್ಥೆ ಸುಲಭವಾಗಿ ಸಹಿಸಿಕೊಳ್ಳುತ್ತಿಲ್ಲ ಎನ್ನುವುದೇ ಸರಿಯಾದ ವಾದವಾಗಿದೆ. ಆದರೆ ಬರೀ ಹತ್ತನೆ ತರಗತಿ ಪಾಸಾಗಿ ಬಂದ ವಿದ್ಯಾರ್ಥಿ ಸಮುದಾಯಕ್ಕೆ ಈ ಬಗ್ಗೆ ತಿಳುವಳಿಕೆ ನೀಡುವ ಬಗೆ ಹೇಗೆ ?

‘ಸ್ತ್ರೀ ಸ್ಪಂದನ’ ದಿಂದ ಚನ್ನಪಟ್ಟಣದಲ್ಲಿ ಒಂದು ಕಾರ್ಯಕ್ರಮ

‘ಪುರುಷ ಪ್ರಾಬಲ್ಯ ಹಾಗೂ ಪುರುಷ ಮೇಲರಿಮೆಯನ್ನು ಸೂಚಿಸುವ ಪುರುಷಾಧಿಪತ್ಯವನ್ನು, ಮೊಟ್ಟ ಮೊದಲು ಶ್ರೀಮಂತ ವರ್ಗಗಳು, ತಮ್ಮ ವರ್ಗ ವ್ಯವಸ್ಥೆಯನ್ನು ದೃಢವಾಗಿ ಸ್ಥಾಪಿಸಿ ಹಾಗೆಯೇ ಉಳಿಸಿಕೊಂಡು ಮುಂದುವರೆಸಲು ಒಂದು ಸಿದ್ಧಾಂತವಾಗಿ ಸೂತ್ರೀಕರಿಸಿ, ಒಂದು ವ್ಯವಸ್ಥೆಯಾಗಿ ರೂಪಿಸಿ ಆಚರಣೆಗೆ ತಂದು, ಹೆಣ್ಣನ್ನು, ಸಂಪೂರ್ಣವಾಗಿ ಗುಲಾಮಳಾಗುವಂತೆ ಮಾಡಲು ಕಾರಣವಾಗಿದೆ ಎಂದು ರೈಟ್ಸ್ ಸಂಸ್ಥೆಯ ನಿರ್ದೇಶಕರಾದ ಶ್ರೀ ನಿಂಗರಾಜರವರು ತಿಳಿಸಿದರು.

ದಿನಾಂಕ : 17-8-2004 ಮತ್ತು ದಿನಾಂಕ : 18-8-2004 ರಂದು ನಗರದ ಸಂಘಟನೆಯಾದ ‘ಸ್ತ್ರೀ ಸ್ಪಂದನ’ ಗ್ರಾಮ ಪಂಚಾಯತಿ ಕಛೇರಿಯ ಸಭಾಂಗಣದಲ್ಲಿ ‘ಏರ್ಪಡಿಸಿದ್ದ’ ಪ್ರಸ್ತುತ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು, ಪರ್ಯಾಯಕ್ಕಾಗಿ ಮಹಿಳಾ ಚಳುವಳಿ’ ಕುರಿತ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಹಿಳೆಯರ ಸಮಸ್ಯೆಗಳ ಕುರಿತು ಚರ್ಚಿಸುತ್ತಾ ಮೇಲಿನ ಮಾತುಗಳನ್ನಾಡಿದರು.

‘ಪುರುಷಾಧಿಪತ್ಯ ಮತ್ತು ವರ್ಗಾಡಳಿತದಿಂದಾಗಿ ಮಹಿಳೆಯರ ಮೇಲೆ ಹೇರಲ್ಪಡುವ ಆರ್ಥಿಕ ನಿರ್ಭಂದಗಳು, ಸಾಮಾಜಿಕ ಕಟ್ಟುಪಾಡುಗಳು ಮತ್ತು ಜವಾಬ್ದಾರಿಗಳು ಹೆಣ್ಣು ಮಕ್ಕಳೆಂದರೆ, ಒಂದು ಹೊರೆ ಎಂದು ದಮನಿತ ವರ್ಗಗಳು ಭಾವಿಸುವಂತಾಗಿದೆ. ಈ ಭಾವನೆಯಿಂದಲೇ ಭ್ರೂಣ ಪರೀಕ್ಷೆ ನಡೆಸಿ ಹೆಣ್ಣು ಭ್ರೂಣವಿದ್ದಲ್ಲಿ ಗರ್ಭವನ್ನೇ ತೆಗೆಸಿ ಬಿಡುತ್ತಾರೆ, ಹಲವು ವೇಳೆ ಭ್ರೂಣ ಹತ್ಯೆ ಮಾಡದೆ ಶಿಶು ಜನನವಾಗಿನಿಂದ ನಡತೆ, ಆಹಾರ, ಶಿಕ್ಷಣ, ಮನರಂಜನೆ, ಮುಂತಾದ ಎಲ್ಲಾ ವಿಷಯಗಳಲ್ಲಿ ಭಿನ್ನವಾಗಿ ಕಂಡು ತಾರತಮ್ಯ ಮಾಡಲಾಗುತ್ತದೆ’, ‘ ಈ ರೀತಿ ಹುಟ್ಟನಿಂದಲೇ ಆಕೆಯ ಮೇಲೆ ಪ್ರಾರಂಭವಾಗುವ ದೌರ್ಜನ್ಯ ಬೆಳೆಯುತ್ತಾ ಶಿಕ್ಷಣ, ಕಲಿಕೆಗಳಿಂದ ವಂಚಿತಳನ್ನಾಗಿಸುತ್ತದೆ. ಹಿಂದು ವೇಳೆ ದೊರೆತರೂ ಪ್ರಸ್ತುತ ಪಠ್ಯ ಕ್ರಮವು ಲಿಂಗ ತಾರತಮ್ಯವನ್ನು ಹಾಗೂ ವ್ಯವಸ್ಥೆ ನಿಗದಿಪಡಿಸಿರುವ, ಒಳ್ಳೆಯ ಮಡದಿ, ಒಳ್ಳೆಯ ತಾಯಿ’ ಎಂಬ ಗುಲಾಮ ಗಿರಿಯ ಪಟ್ಟಗಳ ವಿವರಣೆಯನ್ನೂ ಭೋಧಿಸುವುದಲ್ಲದೆ, ಸ್ವಾವಲಂಬನೆಯನ್ನು ಮೂಡಿಸುವ ಯಾವುದೇ ಮೌಲ್ಯಗಳನ್ನು ಒಳಗೊಂಡಿಲ್ಲ, ಹಾಗೂ ಸರ್ಕಾರದ ನವ ಶಿಕ್ಷಣ ನೀತಿ ಮಹಿಳೆಯರು ತಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು ಅಸಮರ್ಥಕರನ್ನಾಗಿ ಉಳಿಸಿಕೊಳ್ಳುವುದರ ಮೂಲಕ ಅವರನ್ನು ಅಗ್ಗದ ಕಾರ್ಮಿಕರನ್ನಾಗಿ ಶೋಷಿಸುವ ಸರಕಾಗಿಸಬಹುದೆಂಬುದು ಸರ್ಕಾರದ ಉದ್ದೇಶ ಪೂರ್ವ ಸಂಚು’ ಎಂದು ಅವರು ವಾಸ್ತವವನ್ನು ಪರಿಚಯಿಸಿದರು ಹಾಗೂ ಪುರುಷಾದಿಪತ್ಯದ ಕುಟುಂಬದಲ್ಲಿ ಎಲ್ಲಾ ಮಹಿಳೆಯರಿಗೂ ಮದುವೆ ಕಡ್ಡಾಯವಾದ ಕೇಂದ್ರ ವಿಷಯವಾಗಿದ್ದು, ಸಂಸಾರ ನಡಸುವುದೇ ಮಹಿಳೆಯರ ಬದುಕಿನ ಪ್ರಧಾನ ಧ್ಯೇಯ ಎಂಬುದಾಗಿ ಹೆಣ್ಣು ಮಕ್ಕಳ ಮನಸ್ಸಿನಲ್ಲಿ ಆಳವಾಗಿ ಬೇರೂರಿಸಲಾಗುತ್ತದೆ. ಆದರೆ ಪ್ರಸ್ತುತ ಮದುವೆ ಮಾರುಕಟ್ಟೆ ವ್ಯವಹಾರವಾಗಿದ್ದು, ಮಹಿಳೆ ಮತ್ತು ಪುರುಷರ ನಡುವಿನ ದಮನಕ್ಕಾಗಿ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವುದರೊಂದಿಗೆ, ವರದಕ್ಷಿಣೆ ಕಿರುಕುಳಗಳು ಪ್ರಾರಂಭವಾಗಿ ಮಹಿಳೆಯ ಬದುಕು ಆತ್ಮಹತ್ಯೆ ಯೊಂದಿಗೆ ಕೊನೆಗೊಳ್ಳುತ್ತಿದೆ’ ಎಂದು ಅವರು ಸಮಸ್ಯೆಗಳನ್ನು ವಿಶ್ಲೇಷಿಸಿದರು. ಇದರೊಂದಿಗೆ ಪ್ರಸ್ತುತ ಮಹಿಳೆಯರಿಂದ ಎದುರಿಸಲ್ಪಡುತ್ತಿರುವ ಹಲವು ಸಮಸ್ಯೆಗಳಾದ ಭ್ರೂಣ ಹತ್ಯೆ, ಬಾಲ್ಯ ವಿವಾಹ, ವರದಕ್ಷಿಣೆ, ಕಿರುಕುಳ, ಕೌಟುಂಬಿಕ ಹಿಂಸೆ, ಅಸಮಾನತೆ, ಅತ್ಯಾಚಾರ, ಪೌಷ್ಠಿಕಾಂಶದ ಕೊರತೆ, ಮಾಧ್ಯಮಗಳಲ್ಲಿ ಅಶ್ಲೀಲವಾಗಿ ಚಿತ್ರೀಕರಿಸುವುದು ಇತ್ಯಾದಿಗಳ ಕುರಿತು ವಿವರಿಸುವುದರೊಂದಿಗೆ ಪುರುಷಾಧಿಪತ್ಯ ಕುಟುಂಬ ಎಂಬುದು ಆಳುವ ವರ್ಗಗಳಿಂದ ಪೋಷಿಸಲ್ಪಡುವ ಒಂದು ಸಂಸ್ಥೆಯಾಗಿದ್ದು ಅದರ ಮೂಲಕವೇ ಮಹಿಳೆಯರ ಮೇಲಿನ ಇಂತಹ ಹಿಂಸೆಗಳಿಗೆ ಸಮರ್ಥನೆ ಪಡೆಯುತ್ತಿದ್ದು, ಇದಕ್ಕೆ ಮಹಿಳೆಯರು ಸಂಘಟನಾತ್ಮಕ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕಾರ್ಯಗಾರದ ಎರಡನೇ ದಿನವಾದ ದಿನಾಂಕ : 18-8-2004 ಸಮಸ್ಯೆಗಳ ಪರ್ಯಾಯಕ್ಕಾಗಿ, ಮಹಿಳಾ ಚಳುವಳಿಯನ್ನು ಕುರಿತು ಚರ್ಚಿಸಲಾಯಿತು. ಮಹಿಳಾ ಚಳುವಳಿಗಳ ಕುರಿತು ವಿಚಾರ ಮಂಡನೆ ಮಾಡಿದ ಸಂವಾದ ಸಂಸ್ಥೆಯ ಕಿರಣ್ ರವರು ಮಹಿಳೆಯರು ದಿನನಿತ್ಯ ಮಾಡುವ ಹಲವಾರು ಕ್ಲಿಷ್ಟ ಕೆಲಸಗಳಿಂದ ಹಿಡಿದು, ಪುರುಷರಿಗೆ ಅಸಾಧ್ಯವಾದ ಶಿಶು ಹೆರುವವರೆಗೂ ಕಾರ್ಯಗಳ ಸಂಕೀರ್ಣತೆಯನ್ನು ವಿವರಿಸಿ, ಮಹಿಳೆಯರು ಅವರು ಗುರುತಿಸಿದಿದ್ದ ಅವರ ಪಾತ್ರದ ಮಹತ್ವವನ್ನು, ವಿವರಿಸುವುದರ ಮೂಲಕ ಮಹಿಳೆಯರಿಗೆ ಅವರ ಬಗ್ಗೆಯೇ ಇದ್ದ ಕನಿಷ್ಠ ಭಾವನೆಯನ್ನು ಹೋಗಲಾಡಿಸಿದರು ಹಾಗೂ ಪ್ರಸ್ತುತ ಸಮಸ್ಯೆಗಳನ್ನು ಸಂಘಟನಾತ್ಮಕವಾಗಿ

ಎದುರಿಸಲು ಚಳುವಳಿಗಳ ಮಹತ್ವವನ್ನು ವಿವರಿಸಿದರು. ಹಾಗೂ ಚಳುವಳಿಗಳ ಉಗಮ ಹಾಗೂ ಹಿನ್ನೆಲೆಯನ್ನು ವಿವರಿಸುತ್ತಾ ' ಒಂದು ಲಿಂಗಾಧಾರಿತ ಸಮುದಾಯವಾಗಿ ಮಹಿಳೆಯರಿಗೇ ನಿರ್ಧಿಷ್ಟವಾಗಿ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುವುದಕ್ಕಾಗಿಯೇ ಮಹಿಳಾ ಚಳುವಳಿ ಹುಟ್ಟಿದ್ದು" ಎಂದು ತಿಳಿಸಿದರು. ಹಾಗೂ ನಮ್ಮದು ಸಾಮ್ರಾಜ್ಯಶಾಹಿ ಸೈದ್ಧಾಂತಿಕ ಅಡಿಪಾಯ ರೂಪಿಸಿರುವ ಪ್ರತಿಗಾಮಿ ವ್ಯವಸ್ಥೆಯುಳ್ಳ ಸಾಮ್ರಾಜ್ಯಶಾಹಿ ಪೋಷಿತ ಸಂಘಟನೆಗಳಾಗಲೀ, ಆಳುವ ವರ್ಗಗಳ ಮಹಿಳಾ ಸಂಘಟನೆಗಳಾಗಲೀ ಅಥವಾ ಕೋಮುವಾದಿ ಮಹಿಳಾ ಸಂಘಟನೆಗಳಾಗಲೀ ಆಗದೆ ಮಹಿಳೆಯರ ಸ್ಥಾನಮಾನ ಮತ್ತವರ ಜೀವನದಲ್ಲಿ ಮೂಲಭೂತ ಬದಲಾವಣೆಗಳನ್ನು ತರುವಂತಹ ಸಾಮಾಜಿಕ ಪರಿವರ್ತನೆಯ ಗುರಿಯನ್ನು ಹೊಂದಿರುವ ಪ್ರಗತಿಪರ ಪ್ರವೃತ್ತಿಯ ಹೋರಾಟದ ಸುಧಾರಣಾವಾದಿ ಸಂಘಟನೆಗಳಾಗಬೇಕೆಂದು ಮಹಿಳೆಯರಿಗೆ ಕರೆ ನೀಡಿದರು.

ಕಾರ್ಯಗಾರದಲ್ಲಿನ ಜನರಂಗ ತಂಡದ ಕ್ರಾಂತಿ ಗೀತೆಗಳು ಹಾಗೂ ಕಾರ್ಯ ಶೀಲ ಚಟುವಟಿಕೆಗಳು ಮಹಿಳೆಯರಿಗೆ ಸಮಸ್ಯೆಗಳು ಮನ ಮುಟ್ಟುವಂತೆ ಮಾಡಲು ಸಹಾಯವಾಯಿತು.

ಎರಡು ದಿನಗಳ ಮಟ್ಟಿಗೆ ನಡೆದ ಈ ಕಾರ್ಯಗಾರದಲ್ಲಿ ಸುಮಾರು 50 ಮಹಿಳೆಯರು ಹಾಗೂ ಜನರಂಗ ಸಾಂಸ್ಕೃತಿಕ ತಂಡದವರು, ಜನಮುಖಿ ಯುವ ವೇದಿಕೆಯವರು ಹಾಗೂ ಸಂವಾದ, ರೈಟ್ಸ್ ಸಂಸ್ಥೆಯವರು ಪಾಲ್ಗೊಂಡಿದ್ದರು.

- ಸ್ತ್ರೀ ಸ್ಪಂದನ

ಸಾಮಾನ್ಯ ಕನಿಷ್ಠ ಕಾರ್ಯಕ್ರಮ

- ಮಹಿಳೆಯರ ಕುರಿತಂತೆ

ಮೇ 29 ರಂದು ಕೇಂದ್ರದ ಯು.ಪಿ.ಎ. ಮೈತ್ರಿಕೂಟ ಸರ್ಕಾರವು ಎಡಪಕ್ಷಗಳ ಸಮ್ಮತಿಯೊಂದಿಗೆ 'ಸಾಮಾನ್ಯ ಕನಿಷ್ಟ ಕಾರ್ಯಕ್ರಮ' ವೊಂದನ್ನು ಬಿಡುಗಡೆ ಮಾಡಿತು. ಇದರ ಆರು ಮೂಲಭೂತ ತತ್ವಗಳಲ್ಲಿ ಒಂದರಲ್ಲಿ ಮಹಿಳೆಯರ ಕುರಿತ ಪ್ರಸ್ತಾವನೆ ಇದೆ. ರಾಜಕೀಯವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ ಹಾಗೂ ಕಾನೂನು ದೃಷ್ಟಿಯಿಂದ ಮಹಿಳೆಯರ ಸಬಲೀಕರಣ ಇನ್ನುಳಿದಂತೆ ಸಾಮಾಜಿಕ ಸೌಹಾರ್ದತೆ, ಉದ್ಯೋಗ, ರೈತ, ಕೃಷಿ ಕಾರ್ಮಿಕರ ಅಭ್ಯುದಯ, ಪರಿಶಿಷ್ಟ, ಹಿಂದುಳಿದ, ಅಲ್ಪಸಂಖ್ಯಾತ ಸಮುದಾಯದ ಶಿಕ್ಷಣ, ಉದ್ಯೋಗ, ಉತ್ಪಾದಕ ಶಕ್ತಿಗಳ ರಚನಾತ್ಮಕ ಪ್ರತಿಭೆ, ಪ್ರೋತ್ಸಾಹ ಇಂತಹ ಮೂಲಭೂತ ತತ್ವಗಳನ್ನು ಈ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಮಾತನಾಡುತ್ತದೆ.

ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಶೇ 33 ರಷ್ಟು ಮೀಸಲಾತಿ ಒದಗಿಸುವ ಶಾಸನದ ಪ್ರಸ್ತಾಪ ಕೂಡಾ ಇದೆ. ಕೌಟುಂಬಿಕ ಹಿಂಸೆ, ಲಿಂಗ ತಾರತಮ್ಯದ ವಿರುದ್ಧ ಕಾನೂನು ಜಾರಿಗೊಳಿಸುವ, ಹಾಗೂ ಪಂಚಾಯಿತಿಗಳ ಆದಾಯದ ಶೇಕಡ 33 ರಷ್ಟನ್ನು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗಾಗಿ ಮೀಸಲಿಡುವುದು, ಕುಡಿಯುವ ನೀರು, ನೈರ್ಮಲ್ಯ, ಪ್ರಾಥಮಿಕ ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮೊದಲಾದ ವಿಷಯಗಳಲ್ಲಿ ಜವಾಬ್ದಾರಿ ಹೊತ್ತುಕೊಳ್ಳಲು ಮಹಿಳೆಯರಿಗೆ ಪ್ರೋತ್ಸಾಹ ನೀಡುವ ಸೂಚನೆ ಇದೆ. ಮಹಿಳೆಯರಿಗೆ ಮನೆ ಹಾಗೂ ಭೂಮಿಯಂತಹ ಆಸ್ತಿಯ ಒಡೆತನದ ವಿಷಯದಲ್ಲಿ ಹಾಗೂ ಮಹಿಳೆಯರಿಗೆ ಪುರುಷರೊಂದಿಗೆ ಸಮಾನ ಹಕ್ಕುಗಳು, ಹೆಣ್ಣು ಮಗುವಿನ ಹಕ್ಕುಗಳ ರಕ್ಷಣೆಯ ವಿಚಾರ ಕೂಡಾ ಇದೆ.

ಕೇಂದ್ರ ಸರ್ಕಾರದ ಈ ಮೇಲಿನ ಪ್ರಸ್ತಾವನೆಗಳನ್ನು ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಒಟ್ಟು ಹರವಿನಲ್ಲಿ ಇಟ್ಟು ನಾವು ವಿವೇಚನೆ ನಡೆಸಬೇಕಾಗುತ್ತದೆ. ಉದ್ಯೋಗ, ಕೃಷಿ, ಶಿಕ್ಷಣ, ಆರೋಗ್ಯ, ಪರಿಶಿಷ್ಟ ಜಾತಿ, ಪಂಗಡ, ಕೈಗಾರಿಕೆ ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹ ಹಲವಾರು ಸುಧಾರಣೆಗಳನ್ನು ಸೂಚಿಸಲಾಗಿದೆ.

ಪ್ರಧಾನ ಮಂತ್ರಿ ಮನ್‌ಮೋಹನ್ ಸಿಂಗ್‌ರವರು ಪದೇ ಪದೇ ಸುಧಾರಣೆಗಳು ಮುಂದುವರಿಯುತ್ತವೆ, ಆದರೆ ಅವುಗಳಿಗೆ ಮಾನವೀಯ ಮುಖ ಇರುತ್ತದೆ ಎಂದು ಹೇಳುತ್ತಲೇ ಇದ್ದಾರೆ.

ಶಿಕ್ಷಣದಲ್ಲಿ ಕೋಮುವಾದೀಕರಣ ತೆಗೆದು ಹಾಕುವುದು, ಪೌಷ್ಟಿಕತೆಯ ಕಾರ್ಯಕ್ರಮಗಳನ್ನು ಹೆಣ್ಣು ಮಕ್ಕಳಿಗಾಗಿ ವಿಸ್ತರಿಸುವುದು, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನ ಮಾಡುವುದು, ರಾಷ್ಟ್ರೀಯ ಉದ್ಯೋಗ ಗ್ಯಾರಂಟಿ ಕಾಯ್ದೆ ರಚಿಸುವುದು, ಬಡ, ಕೆಳ ಮಧ್ಯಮ ವರ್ಗದ ಕುಟುಂಬದ ಸದಸ್ಯನಿಗೆ ವರ್ಷದಲ್ಲಿ ಕನಿಷ್ಟ 100 ದಿನಗಳ ಕೆಲಸ ಒದಗಿಸುವುದು, ಕೂಲಿಗಾಗಿ ಕಾಳು ಇಂತಹ ಯೋಜನೆ ಆರಂಭಿಸುವಂತಹ ಪ್ರಗತಿಪರ ಆಲೋಚನೆಗಳೇನೋ ಈ

ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಕಂಡುಬರುತ್ತವೆ. ಅಲ್ಪ ಸಂಖ್ಯಾತರ ಮೇಲೆ ನಡೆಯುವ ಕೋಮು ಹಿಂಸಾಚಾರ ತಡೆಗಟ್ಟಲು ಒಂದು ಮಾದರೀ ಸಮಗ್ರ ಶಾಸನ ರಚಿಸುವುದು, ಅಲ್ಪ ಸಂಖ್ಯಾತರ ಆಯೋಗಕ್ಕೆ ಸಂವಿಧಾನಾತ್ಮಕ ಸ್ಥಾನ ಮಾನ ನೀಡುವುದು ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಎನ್.ಡಿ.ಎ ಸರ್ಕಾರ ಬೆಳೆಸಿದ ಜನ ವಿರೋಧೀ ತಂತ್ರಗಳನ್ನು ಮಟ್ಟ ಹಾಕುವ ರೀತಿಯಲ್ಲಿ ಕಾರ್ಯಕ್ರಮಗಳ ಪಟ್ಟಿಯೇನೋ ಇದೆ.

ಈ ರೀತಿಯ ಸುಧಾರಣೆಗಳನ್ನು, ಜನಪರ ಕಾರ್ಯಕ್ರಮಗಳನ್ನು ಬಿಂಬಿಸುವ ಈ ಸಾಮಾನ್ಯ ಕನಿಷ್ಟ ಕಾರ್ಯಕ್ರಮ ಖಾಸಗೀಕರಣದ ಬಗ್ಗೆ, ಆರ್ಥಿಕ ದಿಕ್ಕಿನ ಬಗ್ಗೆ ದಿಟ್ಟವಾದ ಯಾವುದೇ ನಿಲುವನ್ನು ತೆಗೆದುಕೊಂಡ ಹಾಗೆ ಕಾಣುವುದಿಲ್ಲ. ಇಲ್ಲಿ ಏನೇ ಸುಧಾರಣೆಗಳಿಗೆ- ಮಾನವೀಯ ಮುಖ ತೊಡಿಸಲು ಪ್ರಯತ್ನ ಪಟ್ಟಾಗ್ಯೂ ಸಹ - ಇಡಿಯ ಆರ್ಥಿಕ ದಿಕ್ಕಿನ ಮೇಲೆ ಮಹಿಳೆಯರ, ಮಕ್ಕಳ ಭವಿಷ್ಯಗಳು ನಿರ್ಣಯವಾಗುತ್ತವೆ. ಉದಾರೀ ಕರಣದ ಹಿನ್ನೆಲೆಯಲ್ಲಿ ಮೂಲೆಗುಂಪಾಗಿರುವ ಮಹಿಳೆಯರು ಹೊಸ ಚೈತನ್ಯದೊಂದಿಗೆ ಬಾಳಬೇಕೆಂದರೆ ಆರ್ಥಿಕ ದಿಕ್ಕಿನ ಪಥದಲ್ಲಿ ಮೂಲಭೂತ ಬದಲಾವಣೆಯಾಗಬೇಕು.

1984ರಲ್ಲಿ ಆಸ್ಟ್ರೇಲೀಯದ ಸರ್ಕಾರ-ಸರ್ಕಾರದ ಸಾರ್ವಜನಿಕ ವೆಚ್ಚ ಹಾಗೂ ಆದಾಯಗಳನ್ನು ಲಿಂಗ ದೃಷ್ಟಿಕೋನದಿಂದ ನೋಡುವುದಕ್ಕೆ ಪ್ರಾರಂಭಿಸಿದ ಮೇಲೆ ಪ್ರಪಂಚದ ಸುಮಾರು 40 ದೇಶಗಳು ಇದನ್ನು ಅನುಕರಿಸಿದ್ದವು. ಇದರ ಪ್ರಕಾರ ಸರ್ಕಾರದ ಅನೇಕ ಯೋಜನೆಗಳಿಂದ ಮಹಿಳೆಯರು ಹಾಗೂ ಮಕ್ಕಳ ಮೇಲೆ ಆಗುವ ಪರಿಣಾಮಗಳನ್ನು ಪುರುಷರು ಹಾಗೂ ಬಾಲಕರ ಜೊತೆ ಹೋಲಿಸಿ ನೋಡಲಾಗುತ್ತಿತ್ತು. ಇದಕ್ಕೂ ಹೆಚ್ಚು ಮೌಲ್ಯಯುತವಾದ ಅನುಭವ ದಕ್ಷಿಣ ಆಫ್ರಿಕಾದ್ದು. 1995ರಲ್ಲಿ ದಕ್ಷಿಣ ಆಫ್ರಿಕ ಲಿಂಗಾಧಾರಿತ ಆಡಿಟ್ ಎಕ್ಸ್‌ರಸೈಜ್‌ನ್ನು ಎಲ್ಲಾ ಮಂತ್ರಿಗಳಿಗೂ, ಮಾಡಿಸಲಾಗಿತ್ತು. ಇದರ ಮುಖ್ಯ ಉದ್ದೇಶ ಅಸಮಾನತೆಯನ್ನು ಗುರುತಿಸುವುದು ಹಾಗೂ ಅವುಗಳನ್ನು ಹೋಗಲಾಡಿಸುವತ್ತ ಅನೇಕ ಹೆಜ್ಜೆಗಳನ್ನು ಇಡುವುದು ಆಗಿತ್ತು.

ಲಿಂಗಾಧಾರಿತ ಬಜೆಟ್‌ನ್ನು ಗುರುತಿಸುವಾಗ ಮಹಿಳೆಯರ ಅಭ್ಯುದಯಕ್ಕಾಗಿಯೇ ಮಾಡಲಾದ ಅನೇಕ ಯೋಜನೆಗಳನ್ನು ಅಥವಾ ಒಟ್ಟು ಬಜೆಟ್‌ನಲ್ಲಿ ಮಹಿಳೆಯರ ಅಭ್ಯುದಯಕ್ಕೆ ನೀಡಲಾದ ಹಣ ಇವುಗಳನ್ನು ಅವಲೋಕಿಸಬೇಕಾಗುತ್ತದೆ.

ಕೈಗಾರಿಕಾ ತರಬೇತಿ ಕೇಂದ್ರದ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಹೊಲಿಯುವುದು, ಅಡಿಗೆ ಮಾಡುವುದು ಇಂತಹವುಗಳನ್ನೇ ಹೇಳಿಕೊಡಲಾಗುತ್ತದೆ. ಈ ರೀತಿಯ ಮಹಿಳೆಯರ ಸಾಂಪ್ರದಾಯಿಕ ಪಾತ್ರಗಳನ್ನೇ ಸರ್ಕಾರ ಗಟ್ಟಿಗೊಳಿಸುವುದಾದರೆ ಇದು ಯಾವ ರೀತಿಯ ಲಿಂಗ ಸೂಕ್ಷ್ಮತೆ ಎಂದು ನಾವು ಪ್ರಶ್ನಿಸಬೇಕಾಗುತ್ತದೆ.

ಲಿಂಗಾಧಾರಿತ ಬಜೆಟ್ ಮಾಡಬೇಕೆಂದರೆ ಅಲ್ಲಿ ಸಮಾನತೆ ಹಾಗೂ ಪ್ರಜಾಪ್ರಭುತ್ವದ ದೃಷ್ಟಿಕೋನ ಇದ್ದರೆ ಮಾತ್ರ ಸಾಧ್ಯವಾಗುತ್ತದೆ.

ಲಿಂಗಾಧಾರಿತ ಸೂಕ್ಷ್ಮ ಬಜೆಟ್ ಎಂದಾಕ್ಷಣ ಮಹಿಳೆಯರನ್ನು ಪ್ರಧಾನ ಸಂಸ್ಕೃತಿಯ ವಾಹಿನಿಗೆ ಎಳೆದುಕೊಳ್ಳುವ ಪ್ರಯತ್ನವಾಗಿರುತ್ತದೆಯೇ ಹೊರತು, ಪ್ರಧಾನ ಸಂಸ್ಕೃತಿಯ ವೈರುಧ್ಯಗಳನ್ನು ಗುರುತಿಸಿ ಮಾತನಾಡುವುದಾಗಿರುವುದಿಲ್ಲ.

ವಿಶ್ವಬ್ಯಾಂಕ್ ಮಾರ್ಗದರ್ಶನದಲ್ಲಿ ಆರ್ಥಿಕ ರೀತಿ ರೂಪುಗೊಂಡರೆ ಅವು ಜನಪರವಾಗಿರುತ್ತವೆಯೇ ಎಂಬ ಪ್ರಶ್ನೆಯನ್ನು ನಾವಿಂದು ಕೇಳಬೇಕಾಗಿದೆ. ಇಂದು ವಿಶ್ವಬ್ಯಾಂಕ್ ಹಾಗೂ ಅಂತರ್‌ರಾಷ್ಟ್ರೀಯ ಮಾನಿಟರಿ ಫಂಡ್ 'ಲಿಂಗಾಧಾರಿತ ಬಜೆಟ್' ಗೆ ಹೆಚ್ಚು ಮಹತ್ವ ನೀಡುತ್ತಿವೆ. ಒಳ್ಳೆಯ ಸರ್ಕಾರ ಬರಬೇಕೆಂದರೆ ಇವು ಮುಖ್ಯ ಎಂದು ಘೋಷಿಸುತ್ತವೆ. ತಾಂಜಾನಿಯದ ಜೆಂಡರ್ ಬಜೆಟಿಂಗ್ ಸಂಸ್ಥೆಯ ನಿರ್ದೇಶಕಿ ಮೇರಿ ಕುಸುಂಬಿ ಪ್ರಕಾರ ವಿಶ್ವಬ್ಯಾಂಕ್‌ನಂತಹ ಸಂಸ್ಥೆಗಳಿಂದ ಪಡೆಯುವ ನೆರವು ಬಹಳ ವೈರುಧ್ಯವುಳ್ಳದ್ದಾಗಿರುತ್ತದೆ. ವಿಶ್ವಬ್ಯಾಂಕ್ ಪ್ರಗತಿಪರವಲ್ಲದ ಸಲಹೆಗಳನ್ನು ನೀಡುತ್ತಿರುತ್ತದೆ ಎಂದೂ ಕೂಡಾ ಇವರು ಹೇಳುತ್ತಾರೆ. ಆವರ ಒಂದು ಸಲಹೆಯ ಪ್ರಕಾರ ಸಣ್ಣ ರೈತರಿಗೆ ಸಬ್ಸಿಡಿ ನಿಲ್ಲಿಸಬೇಕು ಎಂದಾಗಿತ್ತು. ಇದರಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಬರುವವರು ಹೆಂಗಸರು. ಅವರಿಗೆ ಸಬ್ಸಿಡಿ ಸಿಗದಿದ್ದಲ್ಲಿ ಬದುಕು ದುರ್ಭರವಾಗುತ್ತದೆ.

ಭಾರತದಲ್ಲಿ ಮಹಿಳೆಯರ ಸಮಸ್ಯೆಗಳು ಒಂದೇ ರೀತಿಯಾಗಿಲ್ಲ. ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸುವಾಗ ಮಹಿಳೆಯರ ಆರ್ಥಿಕ ಸಂದರ್ಭಗಳನ್ನು ಕುರಿತು ವಿವೇಚಿಸುವುದು ಅತ್ಯಗತ್ಯ. ಯಾಕೆಂದರೆ ಅನೇಕ ಅಭಿವೃದ್ಧಿ ಯೋಜನೆಗಳಿಂದಾಗಿಯೇ ಇಂದು ಹೆಂಗಸರು ಮೂಲೆಗುಂಪಾಗಿದ್ದಾರೆ. ಜಾಗತೀಕರಣದ ಅನೇಕ ಯೋಜನೆಗಳೂ ಬಡ, ಕಾರ್ಮಿಕ, ಕೂಲಿ ಹೆಂಗಸರನ್ನು ಮೂಲೆಗುಂಪು ಮಾಡುತ್ತಿವೆ. ಮೊದಲು ಲಾಭದಾಯಕ ಸಾರ್ವಜನಿಕ ಕಾರ್ಖಾನೆಗಳನ್ನು ಚಿದಂಬರಂ ಖಾಸಗೀ - ಕರಿಸುವುದಿಲ್ಲವೆಂದು ಘೋಷಿಸಿದ್ದರು. ನಂತರ ಶೇರು ಬೆಲೆಗಳ ಕೃತಕ ಕುಸಿತ ಕಂಡುಬಂದಾಗ ಲಾಭದಾಯಕ ಕಾರ್ಖಾನೆಗಳ ಖಾಸಗೀಕರಣ ಮಾಡುವುದಿಲ್ಲವಾದರೂ, ಜಾಗತಿಕ ಸ್ಪರ್ಧಾತ್ಮಕ

ವಾತಾವರಣದಲ್ಲೂ ನಿರಂತರವಾಗಿ ಲಾಭ ಮಾಡಬಹುದಾದ ಕಂಪನಿಗಳನ್ನು ಮಾತ್ರ ಲಾಭದಾಯಕ ಸರ್ಕಾರಿ ಕಂಪನಿಗಳೆಂದು ಪರಿಗಣಿಸಲಾಗುವುದು ಎಂಬ ಹೊಸ ಕಾಲಂ ಸೇರಿಸಿದರು. ಅಂದರೆ ಖಾಸಗೀಕರಣದ ಬಗ್ಗೆ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಳ್ಳದೇ, ಅದರ ವ್ಯಾಖ್ಯಾನವನ್ನೇ ಬೇರೆ ಮಾಡುತ್ತಾ, ಮಾಡುವ ಸುಧಾರಣೆಗಳಿಗೆ ಮಾನವೀಯ ಮುಖ ತೊಡಿಸುವ ಹಂತದಲ್ಲಿ ಮಹಿಳೆಯರ ಆರ್ಥಿಕತೆ ಏನು? ಎನ್ನುವ ಕಡೆ ಲಕ್ಷವೇ ಇರುವುದಿಲ್ಲ. ಅವರು ಇಲ್ಲಿ ಕಳೆದು ಹೋಗುತ್ತಾರೆ, ಮೂಲೆಗುಂಪಾಗುತ್ತರೆ ಎನ್ನುವ ಅಂಶ ಕೂಡಾ ಗಮನಕ್ಕೆ ಬರುವುದಿಲ್ಲ. ಇದು ಯಾವ ರೀತಿಯ ಲಿಂಗಾಧಾರಿತ ಸಮಾನತೆಯ ಬಜೆಟ್ ?

ಸಂಯುಕ್ತ ಪ್ರಗತಿಪರ ಒಕ್ಕೂಟದ ಬಜೆಟ್‌ನಲ್ಲಿ ರೈತರ ಬಗ್ಗೆ, ಮಹಿಳೆಯರ ಬಗ್ಗೆ, ಹಿಂದುಳಿದವರು, ಪರಿಶಿಷ್ಟಜಾತಿ, ಅಲ್ಪಸಂಖ್ಯಾತರ ಬಗ್ಗೆ ಉದ್ದುದ್ದವಾದ ಮಾತು / ಯೋಜನೆಗಳಿದ್ದಾಗ್ಯೂ ಕೂಡಾ ಇವೆಲ್ಲಕ್ಕೂ ಹಣ ಹೇಗೆ ಹೊಂದಿಸಲಾಗುತ್ತದೆ ಎಂಬುದರ ಬಗ್ಗೆ ಚ ಕಾರ ವಿಲ್ಲ. ಮಹಿಳಾ ವಿಶಿಷ್ಟ ಕಾರ್ಯಕ್ರಮಗಳಿಗೆ ಅತ್ಯಗತ್ಯವಾದ ಹಣದ ಅನುದಾನ ನೀಡದೆ ಅತ್ಯಂತ ಕಡಿಮೆ ಹಣ ನೀಡಲಾಗಿದೆ. ಹೀಗೆ ಕಡಿಮೆ ಹಣ ಒದಗಿಸುವುದರಿಂದ ಸರ್ಕಾರ ತನ್ನ ಜವಾಬ್ದಾರಿಯನ್ನು ಕಳೆದುಕೊಂಡು ಸಾಮಾಜಿಕ ಸೇವೆಗಳ ಖಾಸಗೀಕರಣವನ್ನು ಪ್ರೋತ್ಸಾಹಿಸುತ್ತದೆ.

ಕೃಷಿಯ ಬಗ್ಗೆ ಸಾಕಷ್ಟು ಮಾತುಗಳಿದ್ದರೂ ಕೃಷಿಯ 'ಕ್ರೈಸಿಸ್' ನ್ನು ಎಲ್ಲಿಯೂ ಗಮನಿಸಲಾಗಿಲ್ಲ. ಇದರಿಂದ ಗ್ರಾಮೀಣ ಮಹಿಳೆಯರಿಗೆ ಕಷ್ಟವಾಗುತ್ತಿದೆ. ಕೂಲಿಗಾಗಿ ಕಾಳು ಎನ್ನುವ ಯೋಜನೆಯಿದ್ದಾಗ್ಯೂ ಸಹ ಡಿಫೆನ್ಸ್ ಮೇಲೆ ಮಾಡುತ್ತಿರುವ ಖರ್ಚುಗಳೇನೂ ಕಡಿಮೆ ಆಗಿಲ್ಲ. ಇವು ಸರ್ಕಾರಕ್ಕಿರುವ ಮುಖ್ಯ ಗುರಿಗಳು ಯಾವುದು ಎಂಬುದನ್ನು ತಿಳಿಸುತ್ತವೆ.

2002 ಹಾಗೂ 2003ರ ಬಜೆಟ್‌ನಲ್ಲಿ 300 ಕೋಟಿ ರೂಪಾಯಿಗಳನ್ನು ಬಡಹೆಂಗಸರಿಗಾಗಿ ಎಂದು ಕೊಡಲ್ಪಟ್ಟಿತ್ತು. ಆದರೆ ಇದನ್ನು ಬಳಸದೇ ಹಾಗೆಯೇ ಉಳಿಸಲಾಗಿತ್ತು. ಇದನ್ನು ಬಳಸದೇ ಇದ್ದುದರಿಂದ - ಚಿದಂಬರಂ ಬಜೆಟ್‌ನಲ್ಲಿ ಕೂಡಾ ಮಹಿಳೆ ಹಾಗೂ ಮಕ್ಕಳಿಗೆ ಸಂಬಂಧಪಟ್ಟ ಯೋಜನೆಗಳಲ್ಲಿ ಕಡಿತಗಳನ್ನು ಕಾಣಬಹುದಾಗಿದೆ.

'ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್' ಕೆಳಗೆ ಬರುವ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಗಳಲ್ಲಿ ಕಡಿತ ಮಾಡಲಾಗಿದೆ. ಮಕ್ಕಳ ಸರ್ವಾನುಮತ ಅಭಿವೃದ್ಧಿ ಯೋಜನೆಯಲ್ಲಿ 58 ಕೋಟಿ ಮಾತ್ರ ನೀಡಲಾಗಿದೆ. ಇಂದು 23 ಮಿಲಿಯನ್ ಮಕ್ಕಳು ಅಂಗನವಾಡಿ ಯೋಜನೆಯ ಅಡಿ ಪ್ರಯೋಜನ ಪಡೆಯುತ್ತಿದ್ದಾರೆ. ಇನ್ನೂ 60 ಮಿಲಿಯನ್ ಮಕ್ಕಳಿಗೆ ಈ ಸೇವೆಯು ಅಗತ್ಯ ಇದೆ. ಇದಕ್ಕೆ ಹೆಚ್ಚು ಹಣ ನೀಡಬೇಕಿತ್ತೇ ಹೊರತು, ಕಡಿಮೆ ಅಲ್ಲ.

ಮಹಿಳಾ ಅಬಿವೃದ್ಧಿ ಯೋಜನೆಗೆ 2002-03ರಲ್ಲಿ 212 ಕೋಟಿ ರೂ ನೀಡಲಾಗಿತ್ತು. ಇಂದು ಕೇವಲ 37 ಕೋಟಿ ನೀಡಲಾಗಿದೆ.

ಹೆಚ್ಚಾಗುತ್ತಿರುವ ನಿರುದ್ಯೋಗದ ಸಂದರ್ಭದಲ್ಲಿ ಸ್ತ್ರೀ ಕುಟುಂಬದ ಹೊಣೆಗಾರಿಕೆಯನ್ನು ಒಬ್ಬಂಟಿಯಾಗಿಯೇ ನಿರ್ವಹಿಸುತ್ತಿದ್ದಾಳೆ. ಹಾಗೆಯೇ ವಿಧವೆಯರ ಸಂಖ್ಯೆ ಕೂಡಾ ಹೆಚ್ಚಾಗುತ್ತಿದೆ. ಇದರ ಬಗ್ಗೆ ಬಜೆಟ್‌ನಲ್ಲಿ ಚಕಾರವೆತ್ತಿಲ್ಲ. ಮಹಿಳೆಯರ ತರಬೇತಿಯ ಬಗ್ಗೆ ಕೂಡಾ ಏನೂ ಹೇಳಿಲ್ಲ. ಮಹಿಳೆಯರಿಗೆ ಸ್ವಾವಲಂಬಿ ಉದ್ಯೋಗ ನೀಡಲು ರಚಿತವಾಗಿರುವ ಮಹಿಳಾ ಕೋಶ್‌ಗೆ 1 ಕೋಟಿ ರೂಪಾಯಿ ಹೆಚ್ಚು ನೀಡಲಾಗಿದೆ.

ಟ್ರಾಫಿಕಿಂಗ್ ಮಹಿಳೆಯರ ಮರು ವಸತಿಗೆ ಹೊಸದಾಗಿ ನೀಡಲಾಗಿರುವ ಧನಸಹಾಯ ಸ್ವಾಗತಾರ್ಹ. ಆದರೆ ಈ ಮರು ವಸತಿಯನ್ನು ಹೆಂಗಸರ ಅಗತ್ಯಗಳಿನುಗುಣವಾಗಿ ರೂಪಿಸುವುದು ಅಗತ್ಯವಾಗಿದೆ.

ಇಂದು ಮೂರನೇ ಲಿಂಗ ಕುರಿತ ಪ್ರಶ್ನೆಗಳು ಹೆಚ್ಚು ಕಾಣಿಸಿಕೊಳ್ಳುತ್ತಿದ್ದರೂ ಹಿಜ್ರಾಗಳ ಬಗ್ಗೆ ಕೂಡಾ ಈ ಬಜೆಟ್ ಸಂಪೂರ್ಣ ಮೌನವಾಗಿದೆ.

33% ಶಾಸಕಾಂಗದಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಯಾವ ಕ್ರಮ ಕೈಗೊಳ್ಳುತ್ತದೆ ಎಂಬುದರ ಬಗ್ಗೆ ಯಾವ ತಾತ್ವಿಕ ಚರ್ಚೆ ಇಲ್ಲ.

ಆರೋಗ್ಯಕ್ಕೆ ಸಂಬಂಧಿಸಿದಂತೆ ಇಲ್ಲಿ ಜನಸಂಖ್ಯಾ ನಿಯಂತ್ರಣಕ್ಕೇ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ. ಆರೋಗ್ಯ ಸೇವೆಗಳು ಕುರಿತ ಯೋಜನೆಗಳು ಹೆಂಗಸಿನ 'ಫರ್ಟಿಲಿಟಿ' ನಿಯಂತ್ರಣ ಮಾಡುವುದಕ್ಕೇ ರೂಪಿತವಾಗಿವೆಯೇ ಹೊರತು ಆಕೆಯ ಕುಂದುತ್ತಿರುವ ಆರೋಗ್ಯದ ಬಗ್ಗೆ ಕಾಳಜಿ ಇಲ್ಲ. ಆದಾಗ್ಯೂ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ 'ರಿಪ್ರೊಡಕ್ಟೀವ್' ಆರೋಗ್ಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡದೇ 500 ಕೋಟಿ ಹೆಚ್ಚು ಹಣವನ್ನು ಪೋಲಿಯೋ ಹೋಗಲಾಡಿಸುವುದಕ್ಕೆ ನೀಡಲಾಗಿದೆ 1/3 ರಷ್ಟು ಹೆಚ್ಚು ಹಣವನ್ನು ಹೆರಿಗೆ ಸೌಲಭ್ಯಗಳಿಗಾಗಿ ನೀಡಲಾಗಿದೆ.

1.37 ಲಕ್ಷ ಪ್ರಾಥಮಿಕ ಆರೋಗ್ಯ ಸಂಸ್ಥೆಗಳಿವೆ. ಆದರೆ ಅವು ಮುಖ್ಯವಾಗಿ ಕುಟುಂಬ ಯೋಜನೆಯ ಬಗ್ಗೆಯೇ ಗಮನ

ವಹಿಸುತ್ತವೆ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಈ ಬಗ್ಗೆ ಹೊಸ ಆಲೋಚನೆಗಳನ್ನೇನೂ ಮಾಡಲಾಗಿಲ್ಲ. ಇಲ್ಲಿ 30 ಲಕ್ಷಕ್ಕೆ ಅನುದಾನವನ್ನು ಇಳಿಸಲಾಗಿದೆ.

ಸಾರ್ವಜನಿಕ ಆಹಾರ ಹಂಚಿಕೆಯ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಪ್ರಯತ್ನಗಳೂ ಈ ಬಜೆಟ್‌ನಲ್ಲಿ ಕಾಣಿಸುವುದಿಲ್ಲ. ಲಿಂಗಾಧಾರಿತ ಬಜೆಟ್ ಬಗ್ಗೆ ಮಾತನಾಡುವಾಗ ಇಡಿಯ ಚಳುವಳಿಗಳೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದು, ಹೋರಾಟಗಳೊಂದಿಗೆ ಸಂಬಂಧ ಇಟ್ಟುಕೊಳ್ಳುವುದು ಅಗತ್ಯ. ಇಡಿಯ ಆರ್ಥಿಕ ವ್ಯವಸ್ಥೆಯ ದಿಕ್ಕನ್ನು ಇದರೊಂದಿಗೆ ತಳುಕು ಹಾಕಿ ಒಟ್ಟು ಒಂದು ವಿಶಾಲವಾದ ಚೌಕಟ್ಟಿನಲ್ಲಿಯೇ ಮಹಿಳೆಯರ ಪರವಾದ ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯವಿದೆ.. ಹೀಗಿಲ್ಲದೇ ಮಹಿಳೆಯರನ್ನು ಪ್ರಧಾನ ಸಂಸ್ಕೃತಿಯ ವಾಹಿನಿಗೆ ಎಳೆದುಕೊಳ್ಳುವ ಕಾರ್ಯಕ್ರಮಗಳನ್ನು ರೂಪಿಸುವ ಬಜೆಟ್ - ಲಿಂಗಾಧಾರಿತ ಬಜೆಟ್‌ನ ಕಲ್ಪನೆಯನ್ನೇ ಬುಡಮೇಲು ಮಾಡಿ ಅಪ್ರಸ್ತುತವಾಗಿಸುತ್ತದೆ ಎಂಬುದನ್ನು ಮಹಿಳಾ ಚಳುವಳಿ ಗಮನಿಸಬೇಕಾಗುತ್ತದೆ.

ಆಧಾರ : ಬೃಂದಾ ಕಾರತ್	Gender budgeting "Hindu" Sunday July 24, 2004
2) ಶ್ಯಾಮ್ ಸುಂದರ್	ಉದಯವಾಣಿ 'ಮಾನವೀಯ ಮುಖವಾಡ ತೊಟ್ಟ ಮಾರುಕಟ್ಟೆ ಸೇವೆ'
3) ಎಂ.ವಿ. ಕಾಮತ್	ಉದಯವಾಣಿ 'ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಭವಿಷ್ಯ'
4) ಪ್ರಕಾಶ ಕಾರತ್	ಐಕ್ಯರಂಗ ಜೂನ್ 13, 2004

ಚಂಪಾವತಿ ಎಚ್.ಎಸ್

ಪ್ರಿಯರೇ,

'ಮಾನಸ' ತಿಂಗಳ ಪತ್ರಿಕೆಗೆ ಚಂದಾದಾರರಾಗುವ ಮೂಲಕ ತಾವು ನಮಗೆ ಅನೇಕ ವರ್ಷಗಳಿಂದ ಸಹಕಾರ ನೀಡುತ್ತಾ ಬಂದಿರುತ್ತೀರಿ. ಇತ್ತೀಚಿನ ವರ್ಷಗಳಲ್ಲಿ 'ಮಾನಸ ತಿಂಗಳ ಪತ್ರಿಕೆ' ಅನೇಕ ಕಾರಣಗಳಿಂದ ಒಂದು ರೀತಿಯ ಸ್ಥಗಿತತೆ ಹೊಂದಿರುವುದನ್ನು ತಾವು ಗಮನಿಸಿರಬಹುದು. ಈ ಸ್ಥಗಿತತೆಗೆ ಅನೇಕ ಕಾರಣಗಳಿರಬಹುದು. ಅದರಲ್ಲಿ ಒಂದು ಮುಖ್ಯ ಕಾರಣವೆಂದರೆ - ಲೇಖನಗಳ ಸಮಸ್ಯೆ. ಸಮಕಾಲೀನ ಮಹಿಳಾ ಸಮಸ್ಯೆಗೆ ಸ್ಪಂದಿಸುವುದಕ್ಕೆ, 'ಮಾನಸ ಪತ್ರಿಕೆ' ಯನ್ನು ಅರ್ಥಪೂರ್ಣವಾಗಿ, ನಿಯತಕಾಲಿಕ ವಾಗಿ ತರುವುದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ. ಲೇಖನಗಳ ಸಮಸ್ಯೆ ನಮ್ಮನ್ನು ತೀವ್ರವಾಗಿ ಕಾಡತೊಡಗಿದೆ. ಪ್ರಿಯರೇ, ಜಾಗತೀಕರಣದ ಹಿನ್ನೆಲೆಯಲ್ಲಿ ನಮ್ಮ ಸುತ್ತ - ಮುತ್ತಲಿನ, ರಾಜಕೀಯ, ಸಾಂಸ್ಕೃತಿಕ ಸ್ಥಗಿತತೆ ನಮ್ಮನ್ನು ಬೆಚ್ಚಿ ಬೀಳಿಸುತ್ತಿದೆ, ಭಯ ಹುಟ್ಟಿಸುವಂತಿದೆ. ಹಾಗಾಗಿ 'ಮಾನಸ' ವನ್ನು ಹೆಚ್ಚು ಅರ್ಥಪೂರ್ಣವಾಗಿ ತರಲು ನಮ್ಮನ್ನು ಬಡಿದೆಬ್ಬಿಸುವ ಪ್ರಯತ್ನದಲ್ಲಿ ನಿಮಗೆ ಈ ಮನವಿ ಪತ್ರ ಕಳಿಸುತ್ತಿದ್ದೇವೆ. ಪ್ರಸ್ತುತವೆನಿಸುವ ಲೇಖನ/ಕವನ, ಪರಿಚಯ ಲೇಖನ, ಹೋರಾಟದ ವರದಿಗಳನ್ನು 'ಮಾನಸ' ಕ್ಕೆ ಕಳುಹಿಸಿಕೊಡಿ. ನೀವು ಬರೆಯುವುದರಿಂದ 'ಮಾನಸ' ಹೆಚ್ಚು ಅರ್ಥಪೂರ್ಣವಾಗಬಹುದು, ಉಳಿದು ಬೆಳೆಯಬಹುದು. 'ಮಾನಸ'ವನ್ನು ಉಳಿಸುವ, ಬೆಳೆಸುವ ನಮ್ಮ ಪ್ರಯತ್ನಕ್ಕೆ ನೀವು ಲೇಖನ / ಕವನ/ ವಿಚಾರ ವಿಮರ್ಶೆ, ಪುಸ್ತಕಗಳ ವಿಮರ್ಶೆ ಬರೆಯುವುದರಿಂದ ಸಹಕರಿಸಬಹುದು. ಪತ್ರಿಕೆಯ ಉಳಿಸುವಿಕೆಯ ನೈತಿಕ ಜವಾಬ್ದಾರಿಗಾಗಿಯಾದರೂ ತಾವು ನಮ್ಮ ಜೊತೆ ಕೈ ಜೋಡಿಸುತ್ತೀರಿ, ಬರೆದು ಕಳಿಸುತ್ತೀರಿ ಎಂದು ನಾವು ಆಶಿಸುತ್ತೇವೆ. ಚಂದಾ ನವೀಕರಿಸುವ ಮೂಲಕ, ಚಂದಾದಾರನನ್ನಾಗಿಸುವ ಮೂಲಕ ಕೂಡಾ ತಾವು 'ಮಾನಸ' ಪತ್ರಿಕೆಗೆ ಬೆಂಬಲ ಹಾಗೂ ಸಹಕಾರ ನೀಡಿ.

ಮಾನಸ ಪತ್ರಿಕೆ ಯಾವ ಸಂಸ್ಥೆಯ, ಸರ್ಕಾರದ ನೆರವಿಲ್ಲದೇ ಪ್ರಕಟವಾಗುತ್ತಿರುವ ಮಹಿಳೆಯರೇ ನಡೆಸುತ್ತಿರುವ ಸ್ವಾಯತ್ತ ಪತ್ರಿಕೆ. ಓದುಗರು ಹಾಗೂ ಸಹೃದಯರು ನೀಡುವ ಆರ್ಥಿಕ ನೆರವೇ ಪತ್ರಿಕೆಯ ಜೀವಾಳ. ಚಂದಾದಾರರಿಗೆ ಚಂದಾ ಅವಧಿ ಮುಕ್ತಾಯವಾದುದರ ಬಗ್ಗೆ ಸೂಚನೆಯನ್ನು ನೀಡಲಾಗುತ್ತದೆ. ಓದುಗರು ತಕ್ಷಣ ಚಂದಾ ನವೀಕರಿಸಬೇಕೆಂದು ಕೋರುತ್ತೇವೆ. ಪತ್ರಿಕೆಯು ಉಳಿದು ಬೆಳೆಯಬೇಕಾದರೆ ಓದುಗರ ಸಹಕಾರ ಅತ್ಯಗತ್ತ.

ವಾರ್ಷಿಕ ಚಂದಾ : 100 ರೂ

ಸಂಸ್ಥೆಗಳಿಗೆ : 150 ರೂ

ಸಂ.ಮಂಡಳಿ

REGD No. : CPMG/KA/BGE/289/2003 - 05

BOOK-POST
PRINTED MATTER

ವಿಳಾಸ :

ಮಾನಸ

ಪಂಚಾಯಿತಿ ರಸ್ತೆ, ಕಾಡುಗೋಡಿ

ಬೆಂಗಳೂರು - 560 067